# <u>ಕರ್ನಾಟಕ ಸರ್ಕಾರದ ನಡವಳಿಗಳು</u>

**ವಿಷಯ:** ಪ್ರಬುದ್ಧ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಮತ್ತು ಸಹಾಯಧನ ಮಂಜೂರು ಮಾಡಲು ಕೆಲವು ಮಾನದಂಡಗಳನ್ನು ಪ್ರಬುದ್ಧ ಮಾರ್ಗಸೂಚಿಯಲ್ಲಿ ಸೇರ್ಪಡೆ ಮಾಡುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಸಕಇ 468 ಪಕವಿ 2020, ದಿನಾಂಕ:11.08.2021
2. ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ: ಸಕಇ 468 ಪಕವಿ 2020, ದಿನಾಂಕ: 21.09.2021.
3. ಸರ್ಕಾರದ ಆದೇಶ ಸಂಖ್ಯೆ: ಸಕಇ 494 ಎಸ್ ಎಲ್ ಪಿ 2022, ಬೆಂಗಳೂರು, ದಿನಾಂಕ: 17-11-2022.
4. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ಏಕ ಕಡತ ಸಂಖ್ಯೆ: SWD-PETC0S-6(FS)/3/2023-PETC-SOCIAL WELFARE COMMISSIONER.

****

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಿಂದ (3) ರವರೆಗಿನ ಸರ್ಕಾರಿ ಆದೇಶದಲ್ಲಿ ಪ್ರಬುದ್ಧ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ವಿದೇಶಿ ವಿಶ್ವ ವಿದ್ಯಾಲಯದಲ್ಲಿ ಉನ್ನತ ವ್ಯಾಸಂಗಕ್ಕೆ ಆಯ್ಕೆ ಮಾಡಿ ಧನ ಸಹಾಯ ಒದಗಿಸುವ ಸಂಬಂಧ ಮಾರ್ಗಸೂಚಿಗಳನ್ನೊಳಗೊಂಡಂತೆ ಸರ್ಕಾರದ ಆದೇಶ ಹೊರಡಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ಏಕ ಕಡತದ ತೀರ್ಮಾನದಂತೆ ವಿದೇಶಿ ವಿಶ್ವ ವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನಕ್ಕೆ ಅರ್ಜಿ ಸಲ್ಲಿಸಲು ಅಭ್ಯರ್ಥಿಗಳ ಆಯ್ಕೆ ಮತ್ತು ಅನುದಾನ ಬಿಡುಗಡೆಗೆ ಸಂಬಂಧಿಸಿದಂತೆ ಕೆಲವು ಮಾನದಂಡಗಳನ್ನು ಪ್ರಬುದ್ಧ ಮಾರ್ಗಸೂಚಿಯಲ್ಲಿ ಸೇರ್ಪಡೆಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಈ ಕುರಿತು ಪರಿಶೀಲಿಸಿ, ಈ ಕೆಳಕಂಡ ಮಾರ್ಗಸೂಚಿಗಳನ್ನು ಸೇರ್ಪಡೆ ಮಾಡಲು ನಿರ್ಧರಿಸಿ ಕೆಳಕಂಡ ಆದೇಶ.

## <u>ಸರ್ಕಾರದ ಆದೇಶ ಸಂಖ್ಯೆ: SWD-PETC0S-6(FS)/3/2023-PETC-SOCIAL WELFARE COMMISSIONER ( E-1032772), ಬೆಂಗಳೂರು ದಿನಾಂಕ:15 -05-2023</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಂತೆ, ಪ್ರಬುದ್ಧ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿ ಆಯ್ಕೆಗೆ ಹಾಗೂ ಅನುದಾನ ಬಿಡುಗಡೆಗೆ ಸಂಬಂಧಿಸಿದಂತೆ ಪ್ರಸ್ತುತ ಜಾರಿಯಲ್ಲಿರುವ ಪ್ರಬುದ್ಧ ಮಾರ್ಗಸೂಚಿಗೆ ಈ ಕೆಳಕಂಡ ಮಾನದಂಡಗಳನ್ನು ಸೇರ್ಪಡೆಗೊಳಿಸಿ ಆದೇಶಿದೆ.

ಪ್ರಬುದ್ಧ ಯೋಜನೆಯಡಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಈ ಕೆಳಕಂಡ ಅರ್ಹತಾ ಪರೀಕ್ಷೆಗಳಲ್ಲಿ ನಿಗದಿಪಡಿಸಿದ ಅಂಕಗಳನ್ನು ಗಳಿಸಿರಬೇಕು.

1. **ಅರ್ಜಿ ಸಲ್ಲಿಸಲು ಇರಬೇಕಾದ ಅರ್ಹತೆಗಳು**

1. ಇಂಜಿನೀಯರಿಂಗ್ ಹಾಗೂ ಇತರೆ ಕೋರ್ಸ್ ಗಳನ್ನು ವಿದೇಶಿ ವಿಶ್ವ ವಿದ್ಯಾಲಯಗಳಲ್ಲಿ ಅಧ್ಯಯನ ಮಾಡಲು ಬಯಸಿರುವ ಅಭ್ಯರ್ಥಿಗಳು GRE ಅರ್ಹತಾ ಪರೀಕ್ಷೆಯಲ್ಲಿ, ಮ್ಯಾನೇಜ್ ಮೆಂಟ್ ಅಧ್ಯಯನ ಮಾಡಲು ಬಯಸಿರುವ ಅಭ್ಯರ್ಥಿಗಳು GMAT ಅರ್ಹತಾ ಪರೀಕ್ಷೆಯಲ್ಲಿ ಹಾಗೂ IELTS/TOEFL/PTE ಭಾಷಾ ಪರೀಕ್ಷೆಗಳಲ್ಲಿ ಈ ಕೆಳಕಂಡ ಅಂಕವನ್ನು ಗಳಿಸಿರಬೇಕು.

| | | | |
|---|---|---|---|
| A. | **ಕೋರ್ಸ್**<br>Engineering and Other Courses | GRE :- 300 out of 340 | IELTS :- 6.5 out of 9<br>TOEFL :- 80 out of 120<br>PTE :- 52 out of 90<br>(ಈ ಮೂರು ಭಾಷ ಅರ್ಹತಾ ಪರೀಕ್ಷೆಯಲ್ಲಿ ಯಾವುದಾದರೊಂದರಲ್ಲಿ ನಿಗದಿತ ಅಂಕವನ್ನು ಗಳಿಸಿರಬೇಕು) |
| B. | **ಕೋರ್ಸ್**<br>Management | GMAT :- 600 out of 800 | IELTS :- 6.5 out of 9<br>TOEFL :- 80 out of 120<br>PTE :- 52 out of 90<br>(ಈ ಮೂರು ಭಾಷ ಅರ್ಹತಾ ಪರೀಕ್ಷೆಯಲ್ಲಿ ಯಾವುದಾದರೊಂದರಲ್ಲಿ ನಿಗದಿತ ಅಂಕವನ್ನು ಗಳಿಸಿರಬೇಕು) |

GRE/GMAT/IELTS/TOEFL ಮತ್ತು PTE ಅಂಕವನ್ನು ವಿದೇಶಿ ವಿಶ್ವ ವಿದ್ಯಾಲಯಗಳು ಕೇಳದಿದ್ದರೂ, ಪ್ರಬುದ್ಧ ಯೋಜನೆಯಡಿ ಆಯ್ಕೆಯಾಗಲು ಬಯಸಿರುವ ಅಭ್ಯರ್ಥಿಯು GRE/GMAT/IELTS/TOEFL ಮತ್ತು PTE ಅರ್ಹತಾ ಪರೀಕ್ಷೆಯಲ್ಲಿ ಇಲಾಖೆ ನಿಗದಿಪಡಿಸಿದ ಅಂಕ ಪಡೆಯಬೇಕು ಆಗ ಮಾತ್ರ ಆಯ್ಕೆಗೆ ಅರ್ಹರಾಗುತ್ತಾರೆ.

2. ವಿದೇಶಿ ವಿಶ್ವ ವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನ ಮಾಡಲು ಬಯಸಿರುವ ಅಭ್ಯರ್ಥಿಯು ಪದವಿಯಲ್ಲಿ ಕನಿಷ್ಠ ಶೇ.55 ರಷ್ಟು ಅಂಕವನ್ನು ಗಳಿಸಿರಬೇಕು. ಪಿ.ಹೆಚ್.ಡಿ ಅಧ್ಯಯನ ಮಾಡಲು ಬಯಸಿರುವ ಅಭ್ಯರ್ಥಿಗಳು ಸ್ನಾತಕೋತ್ತರ ಪದವಿಯಲ್ಲಿ ಶೇ.55 ರಷ್ಟು ಅಂಕವನ್ನು ಗಳಿಸಿರಬೇಕು.

3. ಅಭ್ಯರ್ಥಿಯು ಚಾಲ್ತಿಯಲ್ಲಿರುವ ವರ್ಷದ QS/US News Overall Global Rank-500 ಒಳಗಿನ ವಿದೇಶಿ ವಿಶ್ವ ವಿದ್ಯಾಲಯಗಳಿಂದ Unconditional Offer Letter ಪಡೆದಿರಬೇಕು.

ಪ್ರಬುದ್ಧ ಯೋಜನೆಯಡಿ ಅರ್ಜಿ ಸಲ್ಲಿಸಲು ಅಭ್ಯರ್ಥಿಯು ಈ ಮೇಲ್ಕಂಡ ಅರ್ಹತಾ ಮಾನದಂಡಗಳನ್ನು ಪೂರೈಸಿರಬೇಕು.

2. **ಅಭ್ಯರ್ಥಿಗಳ ಆಯ್ಕೆ:-** ಕಂಡಿಕೆ (1) ರಿಂದ (3) ರ ವರೆಗಿನ ಅರ್ಹತಾ ಮಾನದಂಡಗಳನ್ನು ಪೂರೈಸಿದ ಅಭ್ಯರ್ಥಿಗಳನ್ನು ಸರ್ಕಾರ ನಿಗದಿಪಡಿಸಿದ ವಾರ್ಷಿಕ ಗುರಿಗೆ ಅನುಸಾರವಾಗಿ GRE ಹಾಗೂ GMAT ಅರ್ಹತಾ ಪರೀಕ್ಷೆಯ ಅಂಕದ ಆಧಾರದ ಮೇಲೆ ಆಯ್ಕೆ ಮಾಡುವುದು. GRE/GMAT ನಲ್ಲಿ ಹೆಚ್ಚು ಅಂಕಗಳಿಸಿದವರಿಗೆ ಮೊದಲ ಆಧ್ಯತೆ ನೀಡಲಾಗುತ್ತದೆ.
3. **ವಾರ್ಷಿಕ ಆದಾಯ ಮತ್ತು ಸಹಾಯಧನ:-** ಪ್ರಬುದ್ಧ ಯೋಜನೆಯಡಿ ಆಯ್ಕೆಯಾಗುವ ಅಭ್ಯರ್ಥಿಗಳ ಕೌಟುಂಬಿಕ ವಾರ್ಷಿಕ ಆದಾಯದ ಆಧಾರದ ಮೇಲೆ ಈ ಕೆಳಕಂಡ ಕೋಷ್ಟಕದಲ್ಲಿ ಸೂಚಿಸಿರುವ ಮೊತ್ತದ ಧನ ಸಹಾಯ ಹಾಗೂ ಸಾಲವನ್ನು ಒದಗಿಸಲಾಗುವುದು.

| ಕ್ರ.ಸಂ | ವಾರ್ಷಿಕ ಆದಾಯ | ಸಹಾಯಧನ |
|---|---|---|
| 01 | ರೂ.10 ಲಕ್ಷದ ವರೆಗೆ | • ವಿದೇಶಿ ವಿ.ವಿ ಶುಲ್ಕ - ಶೇ.100 ರಷ್ಟು.<br>• ನಿರ್ವಹಣಾ ವೆಚ್ಚ ವಾರ್ಷಿಕ ಗರಿಷ್ಠ ರೂ.8.00 ಲಕ್ಷ.<br>• ವಿಮಾನಯಾನ ವೆಚ್ಚ – ಶೇ. 100 ರಷ್ಟು.<br>• ವಿಮಾ ವೆಚ್ಚ – ಶೇ. 100 ರಷ್ಟು.<br>• ವೀಸಾ ವೆಚ್ಚ – ಶೇ.100 ರಷ್ಟು.<br>• ಇತರೆ ವೆಚ್ಚ – ವಾರ್ಷಿಕ ರೂ.1.00 ಲಕ್ಷಗಳು. |

- ನಿರ್ವಹಣಾ ವೆಚ್ಚವನ್ನು ಒಂದು ವರ್ಷಕ್ಕೆ ಗರಿಷ್ಠ ರೂ.8.00 ಲಕ್ಷ ಪಾವತಿಸುವುದು. ಒಂದೊಮ್ಮೆ ಅಭ್ಯರ್ಥಿ ನಿರ್ವಹಣಾ ವೆಚ್ಚ ರೂ.8.00 ಲಕ್ಷಗಿಂತ ಕಡಿಮೆಯಾಗಿದ್ದರೆ, ಎರಡರಲ್ಲಿ ಯಾವುದು ಕಡಿಮೆಯೋ ಅದನ್ನು ಪಾವತಿಸುವುದು.
- ವಿಮಾನಯಾನ ವೆಚ್ಚವನ್ನು ಕೊರ್ಸ್ ನ ಒಟ್ಟು ಅವಧಿಯಲ್ಲಿ ಒಂದು ಬಾರಿ ಮಾತ್ರ ವಿದೇಶಕ್ಕೆ ತೆರಳಲು ಹಾಗೂ ಕೋರ್ಸ್ ಮುಕ್ತಾಯದ ಬಳಿಕ ಹಿಂದಿರುಗಿ ಭಾರತಕ್ಕೆ Economic Class ನಲ್ಲಿ ಬರಲು ಮಾತ್ರ ಪಾವತಿಸುವುದು.

4. **ಸಾಲ ಹಾಗೂ ಸಹಾಯಧನ:-** ವಾರ್ಷಿಕ ರೂ.10.00 ಲಕ್ಷಕ್ಕಿಂತ ಹೆಚ್ಚು ಆದಾಯ ಹೊಂದಿರುವ ಅಭ್ಯರ್ಥಿಗಳಿಗೆ ಈ ಕೆಳಕಂಡ ದರದಲ್ಲಿ ಸಾಲ ಹಾಗೂ ಸಹಾಯ ಧನವನ್ನು ನೀಡುವುದು.

| ಕ್ರ.ಸಂ | ವಾರ್ಷಿಕ ಆದಾಯ | ವಿವರಣೆ |
|---|---|---|
| 01. | ರೂ.10.00 ಲಕ್ಷ ದಿಂದ ರೂ.20.00 ಲಕ್ಷ | ಒಟ್ಟು ವೆಚ್ಚದ ಶೇ.25 ರಷ್ಟು ಸಹಾಯಧನ ಹಾಗೂ ಶೇ.25 ರಷ್ಟು ಸಾಲ. |
| 02. | ರೂ.20.00 ಲಕ್ಷ ದಿಂದ ರೂ.25.00 ಲಕ್ಷ | ಒಟ್ಟು ವೆಚ್ಚದ ಶೇ.16.5 ರಷ್ಟು ಸಹಾಯಧನ ಹಾಗೂ ಶೇ.16.5 ರಷ್ಟು ಸಾಲ. |

1. ರೂ.10.00 ಲಕ್ಷದಿಂದ ರೂ.20.00 ಲಕ್ಷ ವಾರ್ಷಿಕ ಆದಾಯ ಮಿತಿಯಲ್ಲಿರುವ ಅಭ್ಯರ್ಥಿಗೆ ಒಟ್ಟು ವೆಚ್ಚದಲ್ಲಿ ಶೇ.25 ರಷ್ಟು ಸಾಲ ಹಾಗೂ ಶೇ.25 ರಷ್ಟು ಸಹಾಯಧನ ನೀಡಲಾಗುವುದು.
2. ರೂ.20.00 ಲಕ್ಷದಿಂದ ರೂ.25.00 ಲಕ್ಷ ವಾರ್ಷಿಕ ಆದಾಯ ಮಿತಿಯಲ್ಲಿರುವ ಅಭ್ಯರ್ಥಿಗೆ ಒಟ್ಟು ವೆಚ್ಚದಲ್ಲಿ ಶೇ.16.5 ರಷ್ಟು ಸಾಲ ಹಾಗೂ ಶೇ.16.5 ರಷ್ಟು ಸಹಾಯಧನನೀಡಲಾಗುವುದು.
3. ಒಂದೊಮ್ಮೆ ಅಭ್ಯರ್ಥಿಯು ತನ್ನ ಸ್ವಂತ ಹಣದಲ್ಲಿ ಉಳಿದ ವೆಚ್ಚವನ್ನು ಭರಿಸಲು ಒಪ್ಪಿದರೆ, ಸಹಾಯಧನದ ಭಾಗವನ್ನು ಮಾತ್ರ ಇಲಾಖೆಯಿಂದ ನೀಡುವುದು.
4. ಅಭ್ಯರ್ಥಿಯು ತನ್ನ ಸ್ವಂತ ಶ್ರಮದಿಂದ ಬ್ಯಾಂಕ್ /ಇತರೆ ಮೂಲಗಳಿಂದ ಸಾಲ ಪಡೆದರೆ, ಇಲಾಖೆಯಿಂದ ಸಹಾಯಧನದ ಭಾಗವನ್ನು ಮಾತ್ರ ಪಾವತಿಸುವುದು.
5. ಈ ಮೇಲ್ಕಂಡ ಯಾವುದೇ ಮೂಲದಿಂದ ಸಾಲ ಪಡೆಯದೆ, ಇಲಾಖೆಯಿಂದ ಸಾಲದ ನಿರೀಕ್ಷೆ ಮಾಡಿದರೆ, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಸಹಾಯದಿಂದ ಸಾಲವನ್ನು ಪಡೆಯಲು ಸಹಾಯ ಮಾಡುವುದು.

## 5. ನಿಗಮಗಳ ಮೂಲಕ ಸಾಲದ ವ್ಯವಸ್ಥೆ:-

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ನಿರ್ದಿಷ್ಟ ಸಾಲದ ಅನುದಾನವನ್ನು ಒದಗಿಸುವುದು. ನಿಗಮವು ಪ್ರಬುದ್ಧ ಯೋಜನೆಯಡಿ ಆಯ್ಕೆಯಾಗಿ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದಿಂದ ಶಿಫಾರಸ್ಸುಗೊಂಡ ಅಭ್ಯರ್ಥಿಗಳಿಗೆ ಈ ಕೆಳಕಂಡ ಮಾರ್ಗಸೂಚಿ ಅನ್ವಯ ಕಾಲಕಾಲಕ್ಕೆ ಸಾಲದ ಬಾಬ್ತು ಬಿಡುಗಡೆ ಮಾಡುವುದು.

## 6. ಸಾಲ ಪಡೆಯಲು ಸಲ್ಲಿಸಬೇಕಾದ ಪ್ರಾಥಮಿಕ ದಾಖಲಾತಿಗಳು

ಸಾಲ ಪಡೆಯಬಯಸುವ ಅಭ್ಯರ್ಥಿಗಳು ನಿಗಮವು ನಿಗಧಿಪಡಿಸಿದ ಈ ಕೆಳಕಂಡ ದಾಖಲಾತಿಗಳೊಂದಿಗೆ ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಕಛೇರಿಗೆ ನೀಡುವುದು.

1. ನಿಗಧಿತ ನಮೂನೆಯಲ್ಲಿ ಅರ್ಜಿಯನ್ನು ಪೂರ್ಣವಾಗಿ ಭರ್ತಿ ಮಾಡಬೇಕು. ಅಪೂರ್ಣವಾದ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.
2. ವಿದ್ಯಾರ್ಥಿಯ ಖಾಯಂ ವಾಸದ ದೃಢೀಕರಣಕ್ಕೆ ಆಧಾರ್ ಕಾರ್ಡ್ /ಪಡಿತರ ಚೀಟಿ/ ಚುನಾವಣಾ ಗುರುತಿನ ಚೀಟಿಯ ದೃಢೀಕೃತ ಪ್ರತಿ ಅಥವಾ ಗ್ರಾಮ ಲೆಕ್ಕಾಧಿಕಾರಿಯಿಂದ ನೀಡಿರುವ ವಾಸಸ್ಥಳದ ದೃಢೀಕರಣ ಪತ್ರ ಲಗತ್ತಿಸಬೇಕು.

3. ವಿದ್ಯಾರ್ಥಿಯು ವ್ಯಾಸಂಗದ ಉದ್ದೇಶಕ್ಕೆ ಸೇವಾ ವಲಯದ ವ್ಯಾಪ್ತಿಯಲ್ಲಿ ಬರುವ ಇತರೆ ಹಣಕಾಸು ಸಂಸ್ಥೆಗಳು/ ಬ್ಯಾಂಕ್ ಗಳಿಂದ ಸಾಲದ ನೆರವು ಪಡೆಯದೆ ಇರುವ ಬಗ್ಗೆ ಬೇಬಾಕಿ ಪತ್ರ ನೀಡಬೇಕು.
4. ವಿದ್ಯಾರ್ಥಿಯು ಈ ಸಾಲ ಪಡೆಯುವ ಬಗ್ಗೆ ವಿದ್ಯಾರ್ಥಿಯ ತಂದೆ/ ತಾಯಿ/ ಪೋಷಕರು/ ಜಾಮೀನುದಾರರ ಒಪ್ಪಿಗೆ ಪತ್ರ ಮತ್ತು ಅವರುಗಳ Passport ಅಳತೆಯ ಭಾವಚಿತ್ರವನ್ನು ಅರ್ಜಿ ನಮೂನೆಗೆ ಅಂಟಿಸಬೇಕು.
5. ಸಾಲ ಮರು ಪಾವತಿ ಭದ್ರತೆಗಾಗಿ ವಿದ್ಯಾರ್ಥಿ ಮತ್ತು ತಂದೆ/ಪೋಷಕರು ರೂ. 200 ಗಳ ಛಾಪಕಾಗದದಲ್ಲಿ ಮುಚ್ಚಳಿಕೆ (Indemnity bond) ಬರೆದುಕೊಡುವುದು. ಹಾಗೂ ಜಾಮೀನು ನೀಡುವ ವ್ಯಕ್ತಿಯಿಂದ surety's affidavit Rs. 100 ಗಳ ಛಾಪಕಾಗದಲ್ಲಿ ಮುಚ್ಚಳಿಕೆ ಬರೆದು ಕೊಡುವುದು. ವಿದ್ಯಾರ್ಥಿಯ ತಂದೆ/ಜಾಮೀನುದಾರರ ಆಸ್ತಿ ಮತ್ತು ಋಣ ಬಾರದ ಘೋಷಣೆ ಸಲ್ಲಿಸುವುದು.

## 7. <u>ಸಾಲ ವಿತರಿಸುವಿಕೆ:-</u>

ಪ್ರಬುದ್ಧ ಯೋಜನೆಯಡಿ ಆಯ್ಕೆ ಮಾಡಿ ಶಿಫಾರಸ್ಸು ಮಾಡಿರುವ ಪ್ರಸ್ತಾವನೆ ಮತ್ತು ಅಭ್ಯರ್ಥಿಗಳು ಸಲ್ಲಿಸಿರುವ ಅರ್ಜಿ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ನಿಗಮವು ಪ್ರಥಮ ಹಂತದಲ್ಲಿ ಒಂದನೇ ಕಂತಿನ ಸಾಲವನ್ನು ಮಂಜೂರು ಮಾಡಿ ಮಂಜೂರು ಮಾಡಿದ ಸಾಲದ ಮೊತ್ತಕ್ಕೆ ವಿದ್ಯಾರ್ಥಿಯ ಹೆಸರಿನಲ್ಲಿ ನಿಗಮವು ಸಿದ್ಧಪಡಿಸಿದ ದಸ್ತಾವೇಜು ಕೈಪಿಡಿಯಲ್ಲಿ ಸೂಚಿಸಿದ ನಮೂನೆಯಲ್ಲಿ ಸಾಲದ ಭದ್ರಾತಾ ದಾಖಲಾತಿಗಳಿಗೆ ಅಭ್ಯರ್ಥಿ ಮತ್ತು ಅಭ್ಯರ್ಥಿಯ ತಂದೆ/ತಾಯಿ/ಪೋಷಕರು/ ಜಾಮೀನುದಾರರಿಂದ ಸಹಿ ಪಡೆದು ಸಾಲದ ಮೊತ್ತವನ್ನು ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮೆ ಮಾಡಲು ಕ್ರಮವಹಿಸುವುದು.

## 8. <u>ಸಾಲದ ಭದ್ರತಾ ದಾಖಲಾತಿಗಳು:-</u>

ನಿಗಮವು ಮಂಜೂರು ಮಾಡುವ ಒಟ್ಟು ಸಾಲದ ಮೊತ್ತಕ್ಕೆ ವಿದ್ಯಾರ್ಥಿ ಹಾಗೂ ಜಾಮೀನುದಾರರಿಂದ ಈ ಕೆಳಕಂಡ ಭದ್ರತಾ ದಾಖಲಾತಿಗಳಿಗೆ ಸಹಿ ಪಡೆಯುವುದು.

| | | | |
|---|---|---|---|
| 1 | Promissory Note | ಅನುಬಂಧ-1 | ವಿದ್ಯಾರ್ಥಿಯಿಂದ |
| 2 | D.P Note( Delivery Note) | ಅನುಬಂಧ-2 | |
| 3 | Consideration Receipt | ಅನುಬಂಧ-3 | |
| 4 | Letter of repayment | ಅನುಬಂಧ-4 | |
| 5 | Article of agreement | ಅನುಬಂಧ-5 | |

| | | | |
|---|---|---|---|
| 6 | Letter of guarantee | ಅನುಬಂಧ-6 | |
| 7 | Indemnity bond | | (ಜಾಮೀನುದಾರರಿಂದ)<br>(ವಿದ್ಯಾರ್ಥಿ/ತಂದೆ/ ಪೋಷಕರು) |
| 8 | Securities of Affidavits | | (ಜಾಮೀನುದಾರರಿಂದ) |

9. **ಬಡ್ಡಿಯ ದರ:-**

ಸಾಲದ ಮೊತ್ತಕ್ಕೆ ವಾರ್ಷಿಕವಾಗಿ ಶೇ. 4 ರ ಬಡ್ಡಿಯನ್ನು ವಿಧಿಸಲಾಗುವುದು. ಹಂತಹಂತವಾಗಿ ಸಾಲ ಬಿಡುಗಡೆ ಮಾಡುವುದರಿಂದ ಬಿಡುಗಡೆಯಾದ ಮೊತ್ತಕ್ಕೆ ಮಾತ್ರ ಬಡ್ಡಿ ವಿಧಿಸಲಾಗುವುದು. ಸುಸ್ತಿಯಾದ ಸಾಲಕ್ಕೆ ಶೇ. 4 ರ ಸುಸ್ತಿ ಬಡ್ಡಿಯನ್ನು ವಿಧಿಸಲಾಗುತ್ತದೆ.

10. **ಮರು ಪಾವತಿ ಅವಧಿ:-**

ಅಭ್ಯರ್ಥಿಯು ಕೋರ್ಸ್ ಪೂರ್ಣಗೊಂಡ ನಾಲ್ಕನೇ ತಿಂಗಳುಗಳಿಂದ ಮರು ಪಾವತಿ ಕಂತುಗಳು ತಾನಾಗಿಯೇ ಪ್ರಾರಂಭವಾಗುತ್ತದೆ. ಮರು ಪಾವತಿ ಅವಧಿ ಮೂರು ವರ್ಷಗಳು. ಪ್ರತಿ ತಿಂಗಳು ಪಾವತಿಸಬೇಕಾದ ಅಸಲು ಮತ್ತು ಬಡ್ಡಿ ಮತ್ತು ಸರಾಸರಿ ಬಡ್ಡಿಯನ್ನು ಸೇರಿಸಿ ಮರು ಪಾವತಿ ಕಂತನ್ನು ನಿಗಧಿಪಡಿಸಲಾಗುವುದು.

ಅಭ್ಯರ್ಥಿಯು ಸಾಲ ಪಡೆದು ವ್ಯಾಸಂಗವನ್ನು ಅವಧಿ ಮಧ್ಯದಲ್ಲಿಯೇ ನಿಲ್ಲಿಸಿದರೆ, ಅಥವಾ ಅನುತ್ತೀರ್ಣರಾಗಿ ವ್ಯಾಸಂಗ ಬಿಟ್ಟರೆ ಅಲ್ಲಿಯವರೆಗೆ ನಿಗಮದಿಂದ ಮಂಜೂರು ಮಾಡಿ ಬಿಡುಗಡೆ ಮಾಡಿರುವ ಸಾಲದ ಕಂತುಗಳ ಒಟ್ಟು ಮೊತ್ತವನ್ನು ಶೇ. 4 ರ ಬಡ್ಡಿಯೊಂದಿಗೆ ನಾಲ್ಕು ಕಂತುಗಳಲ್ಲಿ, ಎರಡು ವರ್ಷಗಳಲ್ಲಿ ವಸೂಲಿ ಮಾಡಲಾಗುವುದು.

11. **ಅನುಷ್ಠಾನ:-**

ಪ್ರಸ್ತುತ ಜಾರಿಯಲ್ಲಿರುವ ಮಾರ್ಗಸೂಚಿ ಅನ್ವಯ 2023ರ ಫಾಲ್ ಸೀಸನ್ (August-September) ಗೆ ತೆರಳುವ ಬಹುತೇಕ ಅಭ್ಯರ್ಥಿಗಳು ಆಫರ್ ಲೇಟರ್ ಪಡೆದಿರುತ್ತಾರೆ ಹಾಗೂ ಹಣಕಾಸಿನ ಹೊಂದಾಣಿಕೆಯನ್ನು ಮಾಡಿಕೊಂಡಿರುತ್ತಾರೆ. ಆದ್ದರಿಂದ ಪ್ರಸ್ತುತ ಜಾರಿಯಲ್ಲಿರುವ ಸರ್ಕಾರದ ಮಾರ್ಗಸೂಚಿ ಅನ್ವಯ 2023 ರ ಫಾಲ್ ಸೀಸನ್ (August-September) ಗೆ ಪ್ರವೇಶ ಪಡೆದಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು.

2023 ರ ಫಾಲ್ ಸೀಸನ್ (August-September) ನಂತರ ಪ್ರಬುದ್ಧ ಯೋಜನೆಯಡಿ ವಿದೇಶಿ ವಿಶ್ವ ವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ತೆರಳುವ ಅಭ್ಯರ್ಥಿಗಳನ್ನು ಈ ತಿದ್ದುಪಡಿ ಮಾರ್ಗಸೂಚಿ ಅನ್ವಯ ಆಯ್ಕೆ ಮಾಡಬೇಕು ಹಾಗೂ ಸಾಲ ಮತ್ತು ಸಹಾಯಧನ ವ್ಯವಸ್ಥೆಯನ್ನು ಜಾರಿಗೊಳಿಸಬೇಕು.

ಒಂದೊಮ್ಮೆ 2024 ರ Spring Season (December-Jan) ತೆರಳುವ ಅಭ್ಯರ್ಥಿಗಳು ಆಗಸ್ಟ್-2023 ರೊಳಗೆ ಆಫರ್ ಲೆಟರ್ ಪಡೆದಿದ್ದರೂ, ಅಂತಹ ಅಭ್ಯರ್ಥಿಗಳು ಕಡ್ಡಾಯವಾಗಿ GRE/GMAT ನಲ್ಲಿ ನಿಗದಿಪಡಿಸಿದ ಅಂಕವನ್ನು ಗಳಿಸಬೇಕು. ಆದರೆ ಈ ತಿದ್ದುಪಡಿ ಆದೇಶ ಹೊರಡಿಸುವುದಕ್ಕೆ ಪೂರ್ವದಲ್ಲಿ ಪ್ರಬುದ್ಧ ಯೋಜನೆಯಡಿ ಆಯ್ಕೆಯಾಗಿ ವೀಸಾ ಅಥವಾ ಬೇರಾವುದೇ ಆಡಳಿತಾತ್ಮಕ ಕಾರಣದಿಂದಾಗಿ 2024 ರ Spring Season ಗೆ ತೆರಳುವಂತಹ ಅಭ್ಯರ್ಥಿಗಳಿಗೆ ಈ ತಿದ್ದುಪಡಿ ಮಾರ್ಗಸೂಚಿಯಿಂದ ವಿನಾಯ್ತಿ ನೀಡಲಾಗುವುದು.

ಪ್ರಸ್ತುತ ಜಾರಿಯಲ್ಲಿರುವ ಸರ್ಕಾರದ ಆದೇಶ ಸಂಖ್ಯೆ: ಸಕಇ 468 ಪಕವಿ 2021 ದಿನಾಂಕ: 11.08.2021 ಮತ್ತು ಸರ್ಕಾರದ ಆದೇಶ ಸಂಖ್ಯೆ: ಸಕಇ 494 ಎಸ್ ಎಲ್ ಪಿ 2022, ದಿನಾಂಕ: 17.11.2022 ರ ಮಾರ್ಗಸೂಚಿ ಅನ್ವಯ ಆಗಸ್ಟ್-2023 ರ Fall Season ನಲ್ಲಿ ವಿದೇಶಿ ವಿಶ್ವ ವಿದ್ಯಾಲಯಕ್ಕೆ ತೆರಳುವ ಅಭ್ಯರ್ಥಿಗಳು ಈಗಾಗಲೇ ವಿದೇಶಿ ವಿಶ್ವ ವಿದ್ಯಾಲಯಗಳಿಂದ Offer Letter ಪಡೆದಿರುತ್ತಾರೆ ಅಥವಾ Offer Letter ಬಯಸಿ ಅರ್ಜಿಯನ್ನು ಸಲ್ಲಿಸಿರುತ್ತಾರೆ ಆದ್ದರಿಂದ ಆಗಸ್ಟ್-2023 (Fall Season) ನಂತರದಲ್ಲಿ ಪ್ರಬುದ್ಧ ಯೋಜನೆಯಡಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳನ್ನು ಈ ಮೇಲ್ಕಂಡ ಮಾರ್ಗಸೂಚಿ ಅನ್ವಯ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು ಹಾಗೂ ಸಾಲ ಮತ್ತು ಸಹಾಯಧನ ವ್ಯವಸ್ಥೆಯನ್ನು ಅನುಷ್ಠಾನಗೊಳಿಸವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

15/5

(ಎಲ್.ನರಸಿಂಹಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಮಾಜ ಕಲ್ಯಾಣ ಇಲಾಖೆ.

**ಇವರಿಗೆ:-**

1. ಮಹಾಲೇಖಪಾಲರು (ಎ&ಇ ಲೆಕ್ಕ ಪರಿಶೋಧನೆ-1) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕೋಶ, ಕಲ್ಯಾಣ ಕೇಂದ್ರ, ಬೆಂಗಳೂರು.
5. ಮುಖ್ಯ ಆಡಳಿತಾಧಿಕಾರಿಗಳು, ಪರೀಕ್ಷಾ ಪೂರ್ವ ತರಬೇತಿ ಕೇಂದ್ರ, ವಸಂತ ನಗರ, ಬೆಂಗಳೂರು.
6. ಸಮಾಜ ಕಲ್ಯಾಣ ಇಲಾಖೆ ಕಂಟ್ರೋಲ್ ರೂಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕಟ್ಟಡ, ಯವನಿಕ, ನೃಪತುಂಗ ರಸ್ತೆ, ಬೆಂಗಳೂರು.

7. ಶಾಖಾರಕ್ಷಾಕಡತ/ಹೆಚ್ಚುವರಿಪ್ರತಿಗಳು.

<u>**ಪ್ರತಿ ಮಾಹಿತಿಗಾಗಿ:-**</u>

1. ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.

*****

# ಅನುಬಂಧ-1
# Annexure-1

## ಪ್ರಾಮಿಸರಿ ನೋಟು (PROMISSORY NOTE)

______________ ರೂ.ಗಳು　　　　　　　　　　ಸ್ಥಳ:

ದಿನಾಂಕ:

ತಗಾದೆ ಮಾಡಿದಾಗ, ______________________________________________

ಆದ ನಾನು/ನಾವು ಜಂಟಿಯಾಗಿ ಮತ್ತು ಬೇರೆ ಬೇರೆಯಾಗಿ, ವ್ಯವಸ್ಥಾಪಕ ನಿರ್ದೇಶಕರು, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು, ಇವರಿಂದ ಪಡೆಯಲಾದ ಮೊತ್ತಕ್ಕೆ ಮಾಸಿಕ/ತ್ರೈಮಾಸಿಕ/ಅರೆ ವಾರ್ಷಿಕ /ವಾರ್ಷಿಕವಾಗಿ ಬಾಕಿ ಹಣದೊಂದಿಗೆ ಸಾಲಿಯಾನ ಶೇಕಡ ____________ ಬಡ್ಡಿ ದರದಲ್ಲಿ ಈ ದಿನಾಂಕದಿಂದ ಅಸಲು____________ ರೂ.ಗಳ ಮತ್ತು ಬಡ್ಡಿಯ ಮೊತ್ತವನ್ನು ಸದರಿಯವರಿಗೆ ಸಂದಾಯ ಮಾಡುವುದಾಗಿ ವಾಗ್ದಾನ ಮಾಡುತ್ತೇನೆ/ವೆ.

ರೆವಿನ್ಯೂ ಸ್ಟಾಂಪ್

(ಸಾಲ ಪಡೆಯುವವನ ಸಹಿ)

# ಅನುಬಂಧ-2
# Annexure-2
## ಡಿಮ್ಯಾಂಡ್ ಪ್ರಾಮಿಸರಿ ನೋಟು-ಬಟವಾಡೆ ಪತ್ರ
## (D.P.NOTE DELIVERY LETTER)

ವ್ಯವಸ್ಥಾಪಕ ನಿರ್ದೇಶಕರು,
ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ,
ಬೆಂಗಳೂರು.
ಮಾನ್ಯರೇ,

ವ್ಯವಸ್ಥಾಪಕ ನಿರ್ದೇಶಕರು, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು ಇವರ ಹೆಸರಿನಲ್ಲಿ ________________ ರಿಂದ ಪಡೆಯಲಾದ ________________ ದಿನಾಂಕದ ________________ ರೂ.ಗಳ (________________________ ರೂಪಾಯಿಗಳು) ಡಿಮ್ಯಾಂಡ್ ಪ್ರಾಮಿಸರಿ ನೋಟನ್ನು ದಯವಿಟ್ಟು ಸ್ವೀಕರಿಸಿ.

ವರ್ಗಾವಣೀಯ ಲಿಖಿತಗ ಅಧಿನಿಯಮದ, 1881 ರ 98 (ಎ) ಪ್ರಕರಣದ ನಿಬಂಧನೆಗಳ ಮೇರೆಗೆ ನಿರಾಕರಣ ನೋಟೀಸನ್ನು ಬಿಟ್ಟುಬಿಡಲಾಗಿದೆ ಎಂಬುದನ್ನು ತಾವು ಗಮನಿಸಬೇಕು. ತಗಾದೆ ಮಾಡಿದಾಗಲೂ ಸಂದಾಯ ಮಾಡದಿರುವ ಪ್ರಕರಣಗಳಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಹೊಣೆಗಾರಿಕೆಯಿಂದ ಬಿಡುಗಡೆ ಮಾಡದೇ ನಮ್ಮಲ್ಲಿ ಯಾರಾದರೂ ಸಂದಾಯ ಮಾಡಲು ಸಮಯಾವಕಾಶ ನೀಡುವ ಸ್ವತಂತ್ರ ಹೊಂದಿರುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ತಮ್ಮ ವಿಶ್ವಾಸಿ,

ಸ್ಥಳ:

ದಿನಾಂಕ:

ರೆವಿನ್ಯೂ
ಸ್ಟಾಂಪ್

(ಸಾಲ ಪಡೆಯುವವನ ಸಹಿ)

( ಸಾಲ ಪಡೆಯುವವನ ) ವಿಳಾಸ

________________________
________________________
________________________
________________________

ರೆವಿನ್ಯೂ
ಸ್ಟಾಂಪ್

( ಖಾತರಿದಾರನ ) ವಿಳಾಸ

________________________
________________________
________________________
________________________

# ಅನುಬಂಧ-3

# Annexure-3

## ಮರುಪಾವತಿ ಪತ್ರ (LETTER OF REPAYMENT)

ಗೆ,

ವ್ಯವಸ್ಥಾಪಕ ನಿರ್ದೇಶಕರು,

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು.

ಸ್ಥಳ:

ದಿನಾಂಕ:

ವಿಷಯ: ನಿಮ್ಮಲ್ಲಿರುವ ನನ್ನ/ನಮ್ಮ ಖಾತೆ ಸಂಖ್ಯೆ:____________________

1. ನಿಮ್ಮಿಂದ ನನಗೆ/ನಮಗೆ ಮಂಜೂರಾದ______________ ರೂ. (____________________________ ರೂಪಾಯಿಗಳು) ಗಳ ಸಾಲ ಸೌಲಭ್ಯದ ಪ್ರತಿಫಲವಾಗಿ ನಾನು/ನಾವು ಸದರಿ ಸಾಲ ಸೌಲಭ್ಯದ ಮೇರೆಗೆ ನಿಮ್ಮಿಂದ ಪಡೆಯುವ ಮೊತ್ತ/ಮೊತ್ತಗಳನ್ನು ನಿಮ್ಮ ಕಛೇರಿಯಲ್ಲಿನ ಬಾಕಿ ಹಣ)______________ ದೊಂದಿಗೆ ವಾರ್ಷಿಕ ______________ ರ ಬಡ್ಡಿದರದಲ್ಲಿ ಮಾಸಿಕ/ತ್ರೈಮಾಸಿಕ/ಅರೆವಾರ್ಷಿಕ/ವಾರ್ಷಿಕ ಕಂತುಗಳಲ್ಲಿ ಅಥವಾ ಇಡಿಗಂಟಾಗಿ______________ ರಂದು ಅಥವಾ ಅದಕ್ಕೆ ಮುಂಚಿತವಾಗಿ ನಿಮ್ಮ ಕಛೇರಿಗೆ ಸಂದಾಯ ಮಾಡುತ್ತೇನೆಂದು/ವೆಂದು ವಾಗ್ದಾನ ಮಾಡುತ್ತೇನೆ/ವೆ.
2. ಮೇಲೆ ಹೇಳಲಾದ ಸಾಲ/ಸೌಲಭ್ಯ ಅಥವಾ ಅದರ ಮೇಲಿನ ಯಾವುದೇ ಕಂತಿನ ಮೊತ್ತ/ ಅಥವಾ ಅದರ ಮೇಲಿನ ಬಾಕಿ ಬಡ್ಡಿಯ ಮೊತ್ತದ/ಗಳ ಪಾವತಿದೆ ದಿನಾಂಕದಂದು/ಗಳಂದು ಅಥವಾ ಅದಕ್ಕೆ ಮುಂಚಿತವಾಗಿ, ಮತ್ತು ನೀವು ಕೋರಿದಾಗ ಸಂದಾಯ ಮಾಡಲು ತಪ್ಪಿದಲ್ಲಿ ಮತ್ತು ಅಥವಾ ಸದರಿ ಸಾಲ/ಸೌಲಭ್ಯಕ್ಕೆ ಸಂಬಂಧಿಸಿದಂತೆ, ನಾನು/ನಾವು ಬರೆದುಕೊಟ್ಟ ಅಥವಾ ಮಾಡಿಕೊಂಡ ಯಾವುದೇ ಒಡಂಬಡಿಕೆ, ನಿಬಂಧನೆ ಮತ್ತು ಷರತ್ತುಗಳು ನಿಂದ/ನಮ್ಮಿಂದ ಉಲ್ಲಂಘನೆಯಾಗಿದ್ದಲ್ಲಿ, ನಾನು/ನಾವು ಸಂದಾಯ ಮಾಡಬೇಕಾದ ಅಥವಾ ಸಂದಾಯವಾಗಬೇಕೆಂದು ಕೋರಲಾದ ಸದರಿ ಸಾಲ/ಸೌಲಭ್ಯದ ಪೂರ್ಣ ಮೋತ್ತದ ಮೇಲೆ ಅಥವಾ ಸಂಧರ್ಭಾನುಸಾರ ಅಂತಹ ಉಲ್ಲಂಘನೆಯ ದಿನಾಂಕದಿಂದ, ಸಂದಾಯ ಮಾಡದ ಮೊತ್ತದ ಮೇಲೆ ವಾರ್ಷಿಕ ಶೇ.__________ ದರದಲ್ಲಿ ಹೆಚ್ಚುವರಿ ಬಡ್ಡಿ ಸಂದಾಯ ಮಾಡುತ್ತೇನೆ/ವೆ ಎಂದು ವಾಗ್ದಾನ ಮಾಡುತ್ತೇನೆ/ವೆ.
3. ಮೇಲೆ ಹೇಳಲಾದಂತೆ ನಾನು/ನಾವು ಸಂದಾಯ ಮಾಡಬೇಕಾದ ಮೊತ್ತವನ್ನು/ಗಳನ್ನು ಅಥವಾ ಬಡ್ಡಿ ಮೊತ್ತ/ಅಥವಾ ಹೆಚ್ಚುವರಿ ಬಡ್ಡಿಯನ್ನು ಹಿಂದೆ ಹೇಳಲಾದ ಸಾಲ/ಸೌಲಭ್ಯಕ್ಕೆ ಸಂಬಂಧಿಸಿದಂತೆ ಲೆಕ್ಕಕ್ಕೊಳಪಟ್ಟು ಖರ್ಚು ಹಾಕಬಹುದಾಗಿದೆ ಮತ್ತು ನನಗೆ/ನಮಗೆ ಯಾವುದೇ ನೋಟಿಸಿಲ್ಲದೆ ಪ್ರತಿ ಮಾಸಿಕ/ತ್ರೈಮಾಸಿಕ/ಅರೆ ವಾರ್ಷಿಕ/ವಾರ್ಷಿಕ ಅಂತ್ಯದಲ್ಲಿ ಅಸಲಿಗೆ ಸೇರಿಸಬಹುದಾಗಿದೆ.

4. ನೀವು, ಮೇಲೆ ಹೇಳಲಾದಂತೆ, ಬಡ್ಡಿ ಮೊತ್ತ/ಅಥವಾ ಹೆಚ್ಚುವರಿ ಬಡ್ಡಿಯ ದರವನ್ನು ಹೆಚ್ಚಿಸಲು ಮತ್ತು/ಅಥವಾ ನೀವು ಸೂಕ್ತವೆಂದು ಭಾವಿಸಬಹುದಾದ ಯಾವುದೇ ಸಮಯದಲ್ಲಿ ಅಂತಹ ಬಡ್ಡಿ ಅಥವಾ ಹೆಚ್ಚುವರಿ ಬಡ್ಡಿಯನ್ನು ವಿಧಿಸುವ, ನಿಯತಕಾಲಗಳನ್ನು ಬದಲಾಯಿಸಲು ಹಕ್ಕುಳ್ಳವರಾಗಿರತಕ್ಕದ್ದು.

5. ಮೇಲೆ ಹೇಳಿದ ಸಾಲ/ಸೌಲಭ್ಯ ಅಡಿಯಲ್ಲಿ ನಾನು/ನಾವು ಪಡೆಯಲಾದ ಸಾಲದ ಮೊತ್ತವನ್ನು/ಗಳನ್ನು ಸದರಿ ಸಾಲ/ಸೌಲಭ್ಯಗಳು ಮಂಜೂರಾದ ಉದ್ದೇಶಕ್ಕಾಗಿಯೇ ಬಳಸಲಾಗುವುದೆಂದು ಮತ್ತು ಇತರ ಯಾವುದೇ ಉದ್ದೇಶಕ್ಕಾಗಿ ಬಳಸುವುದಿಲ್ಲವೆಂದು ನಾನು/ನಾವು ಒಪ್ಪಿದ್ದೇನೆ/ವೆ ಮತ್ತು ವಾಗ್ದಾನ ಮಾಡುತ್ತೇನೆ/ವೆ. ಅಷ್ಟೇ ಅಲ್ಲದೆ, ನಿಮಗೆ ನನ್ನ/ನಮ್ಮ ಬಗ್ಗೆ ಯಾವುದೇ ಸಮಯದಲ್ಲಿ ಅನುಮಾನ ಬಂದರೆ ಅಥವಾ ನಾನು/ನಾವು ಸದರಿ ವಾಗ್ದಾನದ ಉಲ್ಲಂಘನೆ ಮಾಡಿದ್ದೇನೆ/ವೆ ಎಂದು ಅಥವಾ ಉಲ್ಲಂಘನೆ ಮಾಡುತ್ತಿದ್ದೇನೆ/ವೆ ಎಂದು ನಂಬಲರ್ಹ ಕಾರಣಗಳಿದ್ದರೆ, ನೀವು ಆ ಸಂದರ್ಭದಲ್ಲಿ ತಹಲ್ ವರೆಗಿನ ಸದರಿ ಸಾಲ/ಸೌಲಭ್ಯದ ನೀಡಿಕೆಯಿಂದ ನಿಮಗೆ ಬರಬೇಕಾದ ಬಾಕಿ ಹಣವನ್ನು ಅಥವಾ ಅದರ ಯಾವುದೇ ಭಾಗವನ್ನು ಇದರಲ್ಲಿ ಅಥವಾ ಇದಕ್ಕೆ ಸಂಬಂಧಿಸಿದ ಯಾವುದೇ ಒಪ್ಪಂದ ಅಥವಾ ದಾಖಲೆಯಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಇದ್ದಾಗ್ಯೂ ಕೂಡಲೇ ಬಾಕಿ ವಾಪಸು ಕೊಡುವಂತೆ ಕೇಳುವ ಹಕ್ಕನ್ನೊಂದಿರತಕ್ಕದ್ದು.

6. ಮೇಲೆ ಹೇಳಿರುವುದರಲ್ಲಿ ಏನೇ ಇದ್ದಾಗ್ಯೂ, ನೀವು ಮೇಲಿನ ಸಾಲ/ಸೌಲಭ್ಯದ ಸಂಬಂಧದಲ್ಲಿ ಬಾಕಿ ಇರುವ ಮೊತ್ತವನ್ನು ಯಾವುದೇ ಸಮಯದಲ್ಲಿ ಹಿಂತಿರುಗಿಸುವಂತೆ ಒತ್ತಾಯಿಸಲು ಸ್ವತಂತ್ರಗಾರರಾಗಿರುತ್ತೀರಿ.

7. ನಾನು/ನಾವು ಸದರಿ ಸಾಲ/ಸೌಲಭ್ಯಕ್ಕೆ ಭದ್ರತೆಯಾಗಿ ನಿಮ್ಮ ಹೆಸರಿನಲ್ಲಿ ______________________ ರೂ. ಗಳು (____________________________________________________ ____________________________ ರೂಪಾಯಿಗಳ) ಡಿಮ್ಯಾಂಡ್ ಪ್ರಾಮಿಸರಿ ನೋಟನ್ನು ಈ ದಿನದಂದು ಬರೆದುಕೊಡಲಾಗಿದೆ ಮತ್ತು ನಿಮಗೆ ಕಳುಹಿಸಲಾಗಿದೆ ಎಂದು ದೃಢಪಡಿಸುತ್ತೇನೆ/ವೆ.

ಸಾಲ ಪಡೆಯುವವರು

ವಿಳಾಸ: ______________________

______________________

______________________

______________________

______________________

# ಅನುಬಂಧ-4
# Annexure-4

## ಪ್ರತಿಫಲ ರಸೀದಿ (CONSIDERATION RECEIPT)

______________________ ರೂ.ಗಳು                                        ಸ್ಥಳ:

ದಿನಾಂಕ:

ವ್ಯವಸ್ಥಾಪಕ ನಿರ್ದೇಶಕರು, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು ಇವರಿಂದ ದಿನಾಂಕ:_ ____________ ರಂದು ತಮ್ಮ ಪರವಾಗಿ ಈ ಕೆಳಕಂಡ ಸಾಕ್ಷಿದಾರರ ಸಮ್ಮುಖದಲ್ಲಿ ನಾನು/ನೀವು ಬರೆದುಕೊಟ್ಟಿರುವ ಪ್ರನೋಟಿನ ಮೇರೆಗೆ____________________ ಸಾಲದ ಕಂತಿನ ಮೊತ್ತ____________________ ರೂಪಾಯಿಗಳನ್ನು ನಾನು/ವು ಬರೆದುಕೊಟ್ಟಿರುವ ಪ್ರನೋಟಿನ ಮೊತ್ತದ ಪ್ರತಿಫಲವಾಗಿ ಈ ದಿನ ಪಡೆದಿರುತ್ತೇನೆ/ವೆ.

**ಸಾಲ ಪಡೆದವರ ಹೆಸರು ಮತ್ತು ವಿಳಾಸ:**

| |
|---|
| ರೆವಿನ್ಯೂ ಸ್ಟ್ಯಾಂಪ್ |

ಸಾಕ್ಷಿದಾರರು:

1.ಹೆಸರು ಮತ್ತು ವಿಳಾಸ

______________________________

____________

______________________________

____________

______________________________

____________

______________________________

____________

ಸಹಿ:

2.ಹೆಸರು ಮತ್ತು ವಿಳಾಸ

______________________________

____________

______________________________

____________

______________________________

____________

______________________________

____________

# ಅನುಬಂಧ-5
# Annexure-5

__________________50/- ರೂ.ಗಳ ಛಾಪಾ ಕಾಗದ (ಸಾಲ ಮರುಸಂದಾಯದ ಅವಧಿಯು ಮೂರು ವರ್ಷಗಳಿಗಿಂತ ಹೆಚ್ಚಾಗಿರುವ ಮತ್ತು ಸಾಲದ ಮೊತ್ತವನ್ನು ಹಂತಹಂತವಾಗಿ ವಿತರಿಸುವ ಸಂದರ್ಭಗಳಲ್ಲಿ ಇದನ್ನು ಪಡೆದುಕೊಳ್ಳತಕ್ಕದ್ದು.

## ಒಪ್ಪಂದದ ನಿಬಂಧನೆಗಳು (ARTICLES OF AGREEMENT)

ಕಂಪೆನಿಗಳ ಅಧಿನಿಯಮ, 1956ರ 25ನೇ ಪ್ರಕರಣದ ಮೇರೆಗೆ ನಿಗಮಿತವಾದ ಒಂದು ನಿಕಾಯವಾಗಿರುವ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು (ಇನ್ನು ಮುಂದೆ ಡಾ.ಬಿ.ಆರ್.ಅ.ಅ.ನಿ ಎಂದು ಕರೆಯಲಾಗಿದ್ದು, ಆ ಪದಾವಳಿಯು ಅದರ ಎಲ್ಲಾ ಹಸ್ತಾಂತರ ಪಡೆದವರು ಮತ್ತು ಹಿತಾಸಕ್ತಿ ಹೊಂದಿರುವ ಉತ್ತರಾಧಿಕಾರಿಗಳನ್ನು ಒಳಗೊಳ್ಳತಕ್ಕದ್ದು). ಇವರ ಪರವಾಗಿ ________________________ ನಲ್ಲಿ ವಾಸಿಸುತ್ತಿರುವ ______________ ವರ್ಷಗಳ ವಯಸ್ಸಿನ ________________________ ರವರ ಮಗ/ಮಗಳು/ಪತ್ನಿ _____________________________ (ಇನ್ನು ಮುಂದೆ ಸಾಲಗಾರನೆಂದು ಕರೆಯಲಾಗಿದ್ದು, ಆ ಪದಾವಳಿಯು ಅವನ/ಅವಳ ಎಲ್ಲಾ ಉತ್ತರಾಧಿಕಾರಿಗಳು, ಕಾನೂನು ಸಮ್ಮತ ಪ್ರತಿನಿಧಿಗಳು, ಕಾರ್ಯ ನಿರ್ವಾಹಕರು, ಆಡಳಿತಾಧಿಕಾರಿಗಳು, ಹಸ್ತಾಂತರ ಪಡೆದವರು, ವರ್ಗಾವಣೆ ಪಡೆದವರು ಮತ್ತು ಹಿತಾಸಕ್ತಿ ಹೊಂದಿರುವ ಉತ್ತರಾಧಿಕಾರಿಗಳು ಎಂದ ಅರ್ಥವನ್ನು ಹೊಂದಿರತಕ್ಕದ್ದು ಹಾಗೂ ಅವರುಗಳನ್ನು ಒಳಗೊಂಡಿರತಕ್ಕದ್ದು) ಇವರು ಮಾಡಿಕೊಟ್ಟಿರುವ ಒಪ್ಪಂದ ಪತ್ರ.

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು ಸಲ್ಲಿಸಲಾದ ಸಾಲಗಾರನ ಮನವಿಯಲ್ಲಿ ಸಾಲಗಾರನ್ನು ಮಾಡಿಕೊಂಡಿರುವ ಮನವಿಯ ಮೇರೆಗೆ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ತಮ್ಮ ನಿರುಪಾಧಿಕ ವಿವೇಚನಡಿಯಲ್ಲಿ ಸಾಲಗಾರನಿಗೆ ಕಾಲಕಾಲಕ್ಕೆ ವಿತರಿಸಲು __________________ ರೂಪಾಯಿ ( ______________________________________________________________ ರೂ. ಗಳು ಮಾತ್ರ) ಗಳನ್ನು (ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು ದಿಂದ ಮಂಜೂರು ಮಾಡಿರುವ ಅಂಥ ಎಲ್ಲಾ ಹಣವನ್ನು ಇನ್ನು ಮುಂದೆ "ಸಾಲ"ವೆಂದು ಉಲ್ಲೇಖಿಸಲಾಗುವುದು) ಮಂಜೂರು ಮಾಡಲು ಒಪ್ಪಿರುವುದರಿಂದ;

ಈ ಒಪ್ಪಿಗೆಯ ಪ್ರತಿಫಲವಾಗಿ ಸಾಲಗಾರನು ಈ ಮುಂದಿನಂತೆ ಒಪ್ಪಿಕೊಂಡಿರುವುದನ್ನು ಈ ಒಪ್ಪಂದ ಪತ್ರವು ಈಗ ಸಾಕ್ಷೀಕರಿಸುತ್ತದೆ.

1. ಈ ಒಪ್ಪಂದದ ಏರ್ಪಾಟಿಗೆ ಮತ್ತು ಅದರ ಅಡಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು ಮಂಜೂರು ಮಾಡಲಿರುವ ಅಂಥ ಸಾಲಕ್ಕೆ ಸಾಲಗಾರನ ಪ್ರಸ್ತಾವನೆಗಳು ಆಧಾರವಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಇವರಲ್ಲಿ ಒಳಗೊಂಡಿರುವ ಪ್ರತಿಯೊಂದು ಹೇಳಿಕೆಗಳು ಮತ್ತು ವಿವರಣೆಗಳ ಸತ್ಯಾಸತ್ಯತೆಯನ್ನು ಈ ಮೂಲಕ ಸಾಲಗಾರನು ಸಮರ್ಥಿಸಕೊಳ್ಳತಕ್ಕದ್ದು ಮತ್ತು ಇದರಲ್ಲಿ ನಮೂದಾಗಿರುವ ಪ್ರಸ್ತಾವನೆಗಳನ್ನು ನಿರ್ವಹಿಸಲು ಜವಾಬುದಾರನಾಗಿರತಕ್ಕದ್ದು.

2. ಸದರಿ ದಾಖಲೆಗಳು ಸ್ಪಷ್ಟವಾಗಿ ಅಥವಾ ಅಗತ್ಯ ಇಂಗಿತದ ಮೂಲಕ ಈ ಭದ್ರತಾ ದಾಖಲೆಗಳಿಗೆ ಮಾರ್ಪಾಡು ಮಾಡುವಷ್ಟರಮಟ್ಟಿಗೆ ಹೊರತು, ಇದರಲ್ಲಿ ಒಳಗೊಂಡಿರುವ ಹಾಗೂ ಅನುಬಂಧ "ಎ" ನಲ್ಲಿ ಸೂಚಿಸಿರುವ ಭದ್ರತಾ ದಾಖಲೆಗಳಲ್ಲಿ ಅಡಕವಾಗಿರುವ, ನಿಬಂಧನೆಗಳ ಮೂಲಕ ಸಾಲವು ನಿಯಂತ್ರಿತವಾಗತಕ್ಕದ್ದು ಎಂಬುದನ್ನು ಸಾಲಗಾರನು ಈ ಮೂಲಕ ಒಪ್ಪಿರುತ್ತಾನೆ.

3. ಸಾಲಗಾರನ ಪ್ರಸ್ತಾವದಲ್ಲಿ ನಮೂದಿಸಿರುವ ಯಾವುದೇ ವಿವರಗಳ ಸತ್ಯತೆಗೆ ಬಾಧಕವಾಗುವಂಥ ಯಾವುದೇ ಸಂದರ್ಭವನ್ನು, ಅಂಥ ಯಾವುದೇ ಸಂದರ್ಭವು ಸಂಭವಿಸಿದ ನಿಕಟ ತರುವಾಯದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು ರವರಿಗೆ ಲಿಖಿತದಲ್ಲಿ ತಿಳಿಸಲು ಸಾಲಗಾರನು ಒಪ್ಪಿರುತ್ತಾನೆ ಮತ್ತು ಜವಾಬುದಾರನಾಗಿರುತ್ತಾನೆ.

4. ಸಾಲಗಾರನ ಪ್ರಸ್ತಾವನೆಗಳಲ್ಲಿ ನಮೂದಿಸಿರುವ ಉದ್ದೇಶಗಳಿಗೆ ಮಾತ್ರ ಸಾಲವನ್ನು ಬಳಸತಕ್ಕದ್ದು, .ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು ಇವರ ಲಿಖಿತ ಅನುಮೋದನೆಯಿಲ್ಲದೆ, ಅದರಿಂದ ಯಾವುದೇ ವೆಚ್ಚವನ್ನು ಮಾಡತಕ್ಕದ್ದಲ್ಲ ಎಂಬುದನ್ನು ಸಾಲಗಾರನು ಸ್ಪಷ್ಟವಾಗಿ ಒಪ್ಪಿರುತ್ತಾನೆ ಮತ್ತು ಅದಕ್ಕೆ ಜವಾಬುದಾರನಾಗಿರುತ್ತಾನೆ.

5. ಸಾಲಗಾರನು ____________________ ರೂ.ಗಳಂತೆ ಪ್ರತಿ ಮಾಸಿಕ/ ತ್ರೈಮಾಸಿಕ/ ಅರ್ಧ ವಾರ್ಷಿಕ/ ವಾರ್ಷಿಕ ಸಮಾನ ಕಂತುಗಳಲ್ಲಿ ಮೊದಲ ಕಂತನ್ನು ________________ ರ _______________ ದಿನದಂದು ಮತ್ತು ತದನಂತರದ ಕಂತುಗಳನ್ನು ಸಂದರ್ಭಾನುಸಾರ ಪ್ರತಿ ತಿಂಗಳು/ ನಾಲ್ಕನೇ ತಿಂಗಳು/ 7ನೇ ತಿಂಗಳ ಅದೇ ದಿನದಂದು ಅಥವಾ ಅದಕ್ಕಿಂತ ಮುಂಚೆ ಸಾಲದ ಹಣವನ್ನು .ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು ರವರಿಗೆ ಮರುಸಂದಾಯ ಮಾಡತಕ್ಕದ್ದು.

6. ಸಂದಾಯ ಮಾಡಬೇಕಾದ ಮೊತ್ತದ ದೈನಂದಿನ ಶಿಲ್ಕಿನ ಜೊತೆಗೆ ಮೇಲೆ ತಿಳಿಸಿದ ಸಾಲದ ಅಸಲು ಮೊತ್ತದ ಮರುಸಂದಾಯ ಕಂತುಗಳ ಮೇಲೆ __________________ ದರದಲ್ಲಿ ಕ್ರಮವಾಗಿ ಬಡ್ಡಿಯನ್ನು ಸಹ ಲೆಕ್ಕ ಹಾಕಿ ಸಾಲಗಾರನು ಸಂದಾಯ

ಮಾಡತಕ್ಕದ್ದು ಮತ್ತು ಯಾವುದೇ ಕಂತನ್ನು ಸಂದಾಯ ಮಾಡಲು ತಪ್ಪಿದಲ್ಲಿ ಮೇಲೆ ಹೇಳಿದ ದರದಲ್ಲಿ ಚಕ್ರಬಡ್ಡಿಯನ್ನು ಅಥವಾ ಸಂದಾಯಕ್ಕಾಗಿ ನಿಗದಿಪಡಿಸಿದ ದಿನಾಂಕದಂದು ಸರಳ ಬಡ್ಡಿಯನ್ನು ಸಂದಾಯ ಮಾಡತಕ್ಕದ್ದು.

7. ಸಾಲ ಮತ್ತು ಅದರ ಮೇಲಿನ ಬಡ್ಡಿ ಸಂದಾಯ ಮತ್ತು ಯಾವುದೇ ಇತರ ಹೊಣೆಗಳು, .ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು ಈ ಸಂಬಂಧದಲ್ಲಿ ಅದಕ್ಕೆ ಸಂದಾಯ ಮಾಡಬೇಕಾದ ಅಥವಾ ಭರಿಸಿದ ಖರ್ಚುಗಳು (ನ್ಯಾಯವಾದಿ ಮತ್ತು ಕಕ್ಷಿದಾರರ ಮಧ್ಯೆ ಸಂದಾಯ ಮಾಡಬೇಕಾದ ಸಂದಾಯವೂ ಒಳಗೊಂಡಂತೆ ) ಮತ್ತು ವೆಚ್ಚಗಳ ಭದ್ರತೆಯಾಗಿ, ಇದರೊಂದಿಗಿರುವ ಅನುಸೂಚಿ ಬಿ ನಲ್ಲಿ ನಿರ್ದಿಷ್ಟಪಡಿಸಿರುವ ಮತ್ತು ವಿವರಿಸಿರುವ ಎಲ್ಲಾ ಯಂತ್ರೋಪಕರಣ/ವಾಹನಗಳನ್ನು (ಇನ್ನು ಮುಂದೆ "ಯಂತ್ರೋಪಕರಣ/ವಾಹನ" ಎಂದು ಉಲ್ಲೇಖಿಸಲಾಗಿದೆ) ಸಾಲಗಾರನು .ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು ರವರ ವಶಕ್ಕೆ ಮತ್ತು ಅಧೀನದಲ್ಲಿ ಇರಿಸಿದ್ದು, ಆ ಉದ್ದೇಶಕ್ಕಾಗಿ ಮತ್ತು ಆ ಸಂಬಂಧದಲ್ಲಿ ಈಗಾಗಲೇ ನೀಡಿರುತ್ತಾನೆ, ಈ ಭದ್ರತೆಯ ಮುಂದುವರಿಕೆ ಅವಧಿಯಲ್ಲಿ ಅವನಿಗೆ ದೊರೆಯಬಹುದಾದ ______________________ ಕಾರ್ಖಾನೆಯ ಕಟ್ಟಡ ಅಥವಾ ಅದರ ಸುತ್ತಮುತ್ತ ಅಥವಾ ಭಾರತದ ಯಾವುದೇ ಸ್ಥಳದಲ್ಲಿ ಇರುವ ಯಾವುದೇ ಯಂತ್ರೋಪಕರಣ/ವಾಹನವನ್ನು ಒತ್ತೆಯಿಡಲು ಸಾಲಗಾರನು ಜವಾಬುದಾರನಾಗಿರುತ್ತಾನೆ.

8. ಈ ಒಪ್ಪಂದದ ಮೂಲಕ .ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು, ಇದರ ಪರವಾಗಿ ಏರ್ಪಾಟಾದ ಭದ್ರತೆಯನ್ನು ಹೊರತುಪಡಿಸಿ, ಯಂತ್ರೋಪಕರಣ/ವಾಹನ ಸಾಲಗಾರನ ನಿರುಪಾಧಿಕ ಸ್ವತ್ತುಗಳಾಗಿದ್ದು, ಯಾವುದೇ ರೀತಿಯ ಅಡಮಾನ, ಆಧಾರ, ಒತ್ತೆ ಅಥವಾ ಧಾರಣಾಧಿಕಾರ ಅಥವಾ ಯಾವುದೇ ರೀತಿಯ ಪೂರ್ವಾಧಿಗಳಿಂದ ಮುಕ್ತವಾಗಿದೆಯೆಂದು ಸಾಲಗಾರನು ದೃಢೀಕರಿಸುತ್ತಾನೆ ಮತ್ತು ಸಮರ್ಥಿಸುತ್ತಾನೆ. ಯಂತ್ರೋಪಕರಣ/ವಾಹನದ ಎಲ್ಲಾ ಬಾಬುಗಳನ್ನು ಚರಾಸ್ತಿಗಳೆಂದು ವರ್ಗೀಕರಿಸುವುದಾಗಿಯೂ ಮತ್ತು ಈ ಒಪ್ಪಂದ ಚಲಾವಣೆ ಅವಧಿಯ ಯಾವುದೇ ಸಮಯದಲ್ಲಿ ಯಂತ್ರೋಪಕರಣ/ವಾಹನದ ಯಾವುದೇ ಬಾಬುಗಳನ್ನು ಶಾಶ್ವತವಾಗಿ ಭೂಮಿಯಲ್ಲಿ ಹುದುಗಿಸಿಡತಕ್ಕುದ್ದಲ್ಲವೆಂದು ಸಾಲಗಾರನು ಮುಂದುವರೆದು ದೃಢಪಡಿಸುತ್ತಾನೆ ಮತ್ತು ಸಮರ್ಥಿಸುತ್ತಾನೆ. ಸಾಲದ ಚಲಾವಣೆ ಅವಧಿಯ ಯಾವುದೇ ಸಮಯದಲ್ಲಿ .ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು ರವರು ಸದರಿ ಯಂತ್ರೋಪಕರಣ/ವಾಹನದ ಯಾವುದೇ ಬಾಬು ಅಥವಾ ಬಾಬುಗಳನ್ನು ಸ್ಥಿರಾಸ್ತಿಗಳೆಂದು ಪರಿಗಣಿಸುವ ಪಕ್ಷದಲ್ಲಿ, ಸಾಲಗಾರನು .ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು ರವರಿಂದ ಆ ಬಗ್ಗೆ ಲಿಖಿತ ಕೋರಿಕೆಯನ್ನು 14 ದಿನಗಳೊಳಗಾಗಿ .ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು ರವರ ಪರವಾಗಿ ಕಾನೂನು ಸಮ್ಮತವಾದ ಅಡಮಾನ (ಡಾ.ಬಿ.ಆರ್.ಅಂಬೇಡ್ಕರ್

ಅಭಿವೃದ್ಧಿ ನಿಗಮ, ಬೆಂಗಳೂರು ರವರ ಇಚ್ಚೆಯ ಅನುಸಾರ, ವಾಹನದ ಅಥವಾ .ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು ರವರು ನಿರ್ದಿಷ್ಟಪಡಿಸಿದ ವಾಹನಗಳ ಸ್ವಾಧೀನ ಸಹಿತ ಅಥವಾ ರಹಿತ) ಮಾಡಿಕೊಡತಕ್ಕದ್ದು ಮತ್ತು ನೊಂದಾಯಿಸತಕ್ಕದ್ದು. ಅಂಥ ಅಡಮಾನವನ್ನು ನಿರ್ವಹಿಸಲು ಮತ್ತು ನೊಂದಾಯಿಸಲು, ಸಾಲಗಾರನು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು ರವರನ್ನು ಸಾಲಗಾರನ ರದ್ದುಪಡಿಸಲಾಗದ ನ್ಯಾಯವಾದಿಯೆಂದು ನೇಮಕ ಮಾಡಿರುತ್ತಾನೆ, ಸಾಲಗಾರನು ಮೇಲೆ ಹೇಳಿದ ಅವಧಿಯ ಒಳಗೆ ಹಾಗೆ ನೇಮಕ ಮಾಡಲು ವಿಫಲನಾದಲ್ಲಿ, ಈ ಅಧಿಕಾರದ ಅನುಸಾರವಾಗಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು ರವರು ಕೈಗೊಂಡ ಎಲ್ಲಾ ಕ್ರಮಗಳು ಕಾಗದ ಪತ್ರಗಳು ಮತ್ತು ಕಾರ್ಯಗಳನ್ನು ಸಾಲಗಾರನು ಅನುಸಮರ್ಥಿಸಲು ಮತ್ತು ದೃಢೀಕರಿಸಲು ಒಪ್ಪಿರುತ್ತಾನೆ.

9. ಸಾಲಗಾರನು, ಈ ಭದ್ರತೆಯ ಮುಂದುವರಿಕೆ ಅವಧಿಯಲ್ಲಿ ಇದರೊಂದಿಗಿರುವ ಅನುಸೂಚಿ 'ಬಿ' ಯಲ್ಲಿ ನಿರ್ದಿಷ್ಟಪಡಿಸಿದ ಮತ್ತು ವಿವರಿಸಿದ ಸದರಿ ಯಂತ್ರೋಪಕರಣ/ವಾಹನದ ಮೇಲೆ ಅಥವಾ ಈ ಭದ್ರತೆಯಮುಂದುವರಿಕೆ ಅವಧಿಯ ಯಾವುದೇ ಸಮಯದಲ್ಲಿ, ಸಾಲಗಾರನಿಗೆ ದೊರೆಯಬಹುದಾದ____________________________ ಕಾರ್ಖಾನೆಯ ಕಟ್ಟಡ ಅಥವಾ ಅದರ ಸುತ್ತಾಮುತ್ತಾ ಅಥವಾ ಭಾರತದ ಯಾವುದೇ ಸ್ಥಳದಲ್ಲಿರುವ ಯಾವುದೇ ಇತರ ಯಂತ್ರೋಪಕರಣ/ವಾಹನದ ಮೇಲೆ, ಈ ಮೂಲಕ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಪರವಾಗಿ ಮಾಡಿಕೊಟ್ಟ ಹೊಣೆಯ ಹೊರತಾಗಿ, ಯಾವುದೇ ರೀತಿಯ ಹೊಣೆ ಅಥವಾ ಪೂರ್ವಾಧಿಯನ್ನು ಸೃಷ್ಟಿಸತಕ್ಕದಲ್ಲ ಅಥವಾ ಕಾ ರ್ಖಾನೆಯ ಕಟ್ಟಡದ ಹೊರಗೆ ಯಂತ್ರೋಪಕರಣ/ವಾಹನ ಯಾವುದೇ ಭಾಗವನ್ನು ತೆಗೆಯತಕ್ಕದ್ದಲ್ಲ.

10. ಸಾಲಗಾರನು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಅನುಮೋದಿತವಾಗಿರುವ ವಿಮಾ ಕಂಪನಿಯಲ್ಲಿ ಆ ನಿಗಮದ ಹಿತಾಸಕ್ತಿಯನ್ನು ದಾಖಲಿಸಿ, ಯಂತ್ರೋಪಕರಣ/ವಾಹನದ ಹಾನಿ ಸಂಭವದ ವಿರುದ್ಧ ಅವುಗಳ ಪೂರ್ಣ ಮಾರುಕಟ್ಟೆ ಮೌಲ್ಯಕ್ಕೆ ವಿಮೆ ಮಾಡಿಸತಕ್ಕದ್ದು ಮತ್ತು ವಿಮೆ ಪಾಲಿಸಿಗಳು, ರಕ್ಷಾಪತ್ರಗಳು, ಪ್ರೀಮಿಯಂ ರಸೀದಿಗಳು ಇತ್ಯಾದಿಗಳನ್ನು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ನೀಡತಕ್ಕದ್ದು. ಸಾಲಗಾರನು ಅಂಥ ವಿಮೆಯನ್ನು ಮಾಡಿಸಲು ವಿಫಲನಾದಲ್ಲಿ, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು ಸದರಿ ಯಂತ್ರೋಪಕರಣ/ವಾಹನದ ಮೇಲೆ ಹಾನಿ ಸಂಭವದ ವಿರುದ್ಧ ವಿಮೆ ಮಾಡಿಸಬಹುದು ಮತ್ತು ಪ್ರೀಮಿಯಂ ಮತ್ತು ಇತರೆ ವೆಚ್ಚಗಳನ್ನು ಸಾಲಗಾರನ ಖಾತೆಗೆ ಖರ್ಚು ಹಾಕಬಹುದು, ಶತ್ರು ವಿಮಾನ, ಸೇನೆ ಅಥವಾ ಜನಜಂಗುಳಿಯಿಂದಾಗುವ ಹಿಂಸಾಚಾರ, ಅಥವಾ ಮುಷ್ಕರ ಅಥವಾ ದೊಂಬಿಗಳಿಂದಾಗಿ ಭದ್ರತೆ ಮತ್ತು ಸುರಕ್ಷತೆಗೆ ಅಪಾಯ ಉಂಟಾಗಬಹುದೆಂಬ ಸಂಶಯ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ

. ನಿಗಮಕ್ಕೆ ಯಾವುದೇ ಸಮಯದಲ್ಲಿ ಉಂಟಾದರೆ, ಆಗ ಅದು ಯಂತ್ರೋಪಕರಣ/ವಾಹನಕ್ಕೆ ಶತ್ರು ವಿಮಾನ, ಸೇನೆ ಅಥವಾ ಜನಜಂಗುಳಿಯಿಂದಾಗುವ ಹಿಂಸಾಚಾರ, ಅಥವಾ ಮುಷ್ಕರ ಅಥವಾ ದೊಂಬಿಯಿಂದ ಉಂಟಾಗುವ ನಷ್ಟದ ವಿರುದ್ಧ ವಿಮೆ ಮಾಡಿಸುವಂತೆ ಸಾಲಗಾರನನ್ನು ಕೋರಬಹುದು ಮತ್ತು ಸಾಲಗಾರನು ಆ ರೀತಿಯಂತೆ ವಿಮೆ ಮಾಡಿಸಲು ವಿಫಲನಾದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು ತನ್ನ ವಿವೇಚನಾನುಸಾರ ಮೇಲೆ ಹೇಳಿದಂಥ ನಷ್ಟ ಅಥವಾ ಹಾನಿಗಳ ವಿರುದ್ಧ ವಿಮೆ ಮಾಡಿಸಬಹುದು. ಅಂಥ ವಿಮಾ ಖರ್ಚನ್ನು ನೀಡತಕ್ಕದ್ದು ಮತ್ತು ಸಾಲಗಾರನ ಖಾತೆಗೆ ಖರ್ಚು ಹಾಕ ತಕ್ಕದು. ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು ಮಧ್ಯಸ್ಥಿಕೆಗೆ ಸಂಬಂಧಿಸಿದಂತೆ ಹೊಂದಾಣಿಕೆ, ಇತ್ಯರ್ಥ, ರಾಜಿಗಳನ್ನು ಮಾಡಿಕೊಳ್ಳುವ ಅಥವಾ ಯಾವುದೇ ತೀರ್ಪು ಹೊರಡಿಸುವ ಅಧಿಕಾರ ಹೊಂದಿರತಕ್ಕದ್ದು ಮತ್ತು ಅದು ಸಾಲಗಾರನ ಮೇಲ ಸಿಂಧು ಮತ್ತು ಬಂಧನಕಾರಿಯಾಗಿರತಕ್ಕದ್ದು ಎಂಬುದನ್ನು ಸಾಲಗಾರನು ಸ್ಪಷ್ಟವಾಗಿ ಒಪ್ಪಿರುತ್ತಾನೆ. ಅಲ್ಲದೆ, . ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು ಅಂಥ ಪಾಲಿಸಿ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ಕ್ಲೇಮಿನ ಅಡಿಯಲ್ಲಿ ನೀಡಲಾಗುವ ಎಲ್ಲಾ ಹಣಗಳನ್ನು ಸ್ವೀಕರಿಸಲಾದ ಮತ್ತು ಅದಕ್ಕೆ ಕಾನೂನು ಮಾನ್ಯ ರಸೀದಿ ನೀಡುವ ಹಕ್ಕನ್ನು ಹೊಂದಿರತ್ಕದ್ದು ಮತ್ತು ಹಾಗೆ ಸ್ವೀಕರಿಸಲಾದ ಮೊತ್ತವನ್ನು ಸಾಲದ ಖಾತೆಗೆ ಜಮಾ ಮಾಡತಕ್ಕದ್ದು ಮತ್ತು ಹೆಚ್ಚಿನ ಮೊತ್ತ ಸ್ವೀಕರಿಸಬಹುದಾಗಿತ್ತು ಎಂದು ಆಕ್ಷೇಪಿಸುವ ಅಥವಾ ಪ್ರಶ್ನಿಸುವ ಮತ್ತು ಅಂಥ ಜಮಾವಣೆಯ ತರುವಾಯ ಅಂಥ ಲೆಕ್ಕ ಖಾತೆಯ ಮೇಲೆ ಸಲ್ಲತಕ್ಕ ಉಳಿದ ಶಿಲ್ಕಿನ ಬಗ್ಗೆ ಇರುವ ಅವನ ಹೊಣೆಗಾರಿಕೆಯ ಬಗ್ಗೆ ತರಕಾರು ಮಾಡುವ ಹಕ್ಕು ಸಾಲಗಾರನಿಗೆ ಇರತಕ್ಕದ್ದಲ್ಲ ಎಂಬುದನ್ನು ಸಾಲಗಾರನು ಒಪ್ಪಿರುತ್ತಾನೆ.

11. ಸಾಲಗಾರನು, ಈ ಮೂಲಕ ಒತ್ತೆಯಿಡಲಾದ ಸ್ವತ್ತುಗಳನ್ನು ಹೊರತುಪಡಿಸಿ, ಅವನ ಯಾವುದೇ ಸ್ವತ್ತುಗಳ ಮೇಲಿರುವ ಪ್ರಸ್ತುತ ಹೊಣೆಗಳಿಗೆ ಸಂಬಂಧಿಸಿದಂತೆ ಮತ್ತು ಇತರ ಸಾಲ ಸಂಸ್ಥೆಗಳು ಮತ್ತು ಕಂತು ಖರೀದಿ ಹಣಕಾಸು ಸಂಸ್ಥೆಗಳೊಂದಿಗೆ ಮಾಡಿಕೊಂಡಿರುವ ಎಲ್ಲಾ ಏರ್ಪಾಟುಗಳ ಬಗ್ಗೆ ದಾಖಲೆಗಳ ದೃಢೀಕೃತ ಯಥಾ ಪತ್ರಿಗಳನ್ನು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಒದಗಿಸತಕ್ಕದ್ದು.

12. ಸಾಲಗಾರನು ಎಲ್ಲಾ ವೆಚ್ಚಗಳನ್ನು ಎಂದರೆ, ಸಾಲಿಸಿಟರ್ ಮತ್ತು ವಕೀಲರ ಫೀಜುಗಳು. ನೋಂದಣಿ ಸ್ಟಾಂಪು, ಸುಂಕದ ವೆಚ್ಚಗಳು ಮತ್ತು ಸಾಲದ ಸಂಬಂಧವಾಗಿ ಭರಿಸಿದ ಇತರೆ ಪ್ರಾಸಂಗಿಕ ವೆಚ್ಚಗಳನ್ನು ಭರಿಸತ್ಕದ್ದು.

13. ಸಾಲಗಾರನು ಎಲ್ಲಾ ವಿವರ ಪತ್ರಗಳು, ಲೆಕ್ಕಪತ್ರಗಳು, ವರದಿಗಳು, ದಾಖಲೆಗಳು, ಪ್ರಮಾಣ ಪತ್ರಗಳು ಮತ್ತು ಮಾಹಿತಿಗಳನ್ನು ಒದಗಿಸತಕ್ಕದ್ದು ಮತ್ತು ಪರೀಕ್ಷಿಸತಕ್ಕದ್ದು ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು ಈ ಬಗ್ಗೆ ಕಾರ್ಯಗತಗೊಳಿಸುವುದಕ್ಕಾಗಿ ಅಗತ್ಯಪಡಿಸುವ ಎಲ್ಲಾ ದಾಖಲೆಗಳನ್ನು ನಿರ್ವಹಿಸತಕ್ಕದ್ದು ಮತ್ತು ಎಲ್ಲಾ ಕ್ರಮ

ಮತ್ತು ಕಾರ್ಯಗಳನ್ನು ಮಾಡತಕ್ಕದ್ದು, ಮತ್ತು ಸಾಲಗಾರನು ಇದರ ಅಡಿಯಲ್ಲಿ ಅಗತ್ಯಪಡಿಸಬಹುದಾದ ಎಲ್ಲವನ್ನೂ ನಿರ್ವಹಿಸಲು ಡಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವನ್ನು ಸಾಲಗಾರನ ಹೆಸರಿನಲ್ಲಿ ಮತ್ತು ಅವನ ಪರವಾಗಿ ನ್ಯಾಯವಾದಿಯಾಗಿ ಸಾಲಗಾರನು ಈ ಮೂಲಕ ನೇಮಿಸುತ್ತಾನೆ.

14. ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ನೌಕರ ಅಥವಾ ತಾಂತ್ರಿಕ ತಜ್ಞ ಇವನ ಮೂಲಕ ಎಲ್ಲಾ ಸೂಕ್ತ ಸಮಯದಲ್ಲಿ ಸಾಲಗಾರನ ಲೆಕ್ಕಪತ್ರ ಪುಸ್ತಕಗಳನ್ನು ಮತ್ತು ಕಾರ್ಖಾನೆಯನ್ನು ಪರಿಶೀಲನೆ ಮಾಡಿಸುವ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಇರತಕ್ಕದ್ದು. ಸಾಲಗಾರನ ಹಣಕಾಸಿನ ಸ್ಥಿತಿಯನ್ನು ಮತ್ತು ನಿರ್ವಹಣಾ ವ್ಯಾಪ್ತಿಯನ್ನು ಸಂಪೂರ್ಣವಾಗಿ ಮತ್ತು ಸರಿಯಾಗಿ ಪ್ರತಿಬಿಂಬಿಸಲು ಸಾಕಷ್ಟು ಪುಸ್ತಕಗಳನ್ನು ಮತ್ತು ದಾಖಲೆಗಳನ್ನು ಸಹ ಸಾಲಗಾರನು ನಿರ್ವಹಿಸತಕ್ಕದ್ದು ಮತ್ತು . ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು ಅಗತ್ಯಪಡಿಸಬಹುದಾದ ಅಂಥ ಮಾಹಿತಿ ಮತ್ತು ವಿವರಣೆಗಳನ್ನು ಮತ್ತು ಅಂಥ ಸಮಯ ಮತ್ತು ಅಂಥ ಮಧ್ಯಂತರಗಳಲ್ಲಿ ಸಲ್ಲಿಸಲು ಏರ್ಪಾಟು ಮಾಡತಕ್ಕದ್ದು.

15. ಸಾಲಗಾರನು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಒತ್ತೆ ಇಟ್ಟಿರುವ ಯಂತ್ರೋಪಕರಣ/ವಾಹನದ ವಿವರಗಳನ್ನು ತಿಳಿಸುವ ಒಂದು ರಿಜಿಸ್ಟರನ್ನು ನಿರ್ವಹಿಸತಕ್ಕದ್ದು. ಭದ್ರತೆಯ ಹಿತಾಸಕ್ತಿಯು ಸಂಬಂಧಪಟ್ಟ ಎಲ್ಲರಿಗೂ ಎದ್ದು ಕಾಣುವ ರೀತಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಒತ್ತೆಯಿಟ್ಟ ಯಂತ್ರೋಪಕರಣ/ವಾಹನದ ಪಟ್ಟಿಯೊಂದನ್ನು ಕಾರ್ಖಾನೆ ಸಭಾಂಗಣ ಅಥವಾ ಸೂಚನಾ ಫಲಕದಲ್ಲಿ ಪ್ರದರ್ಶಿಸತಕ್ಕದ್ದು.

16. ಸಾಲಗಾರನು, ಯಂತ್ರೋಪಕರಣ/ವಾಹನವನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳತಕ್ಕದ್ದು ಮತ್ತು ಯಂತ್ರೋಪಕರಣ/ವಾಹನದ ಸುಸ್ಥಿತಿಗೆ ಅಗತ್ಯವಾದ ಎಲ್ಲಾ ಕ್ರಮ ಮತ್ತು ಕಾರ್ಯಗಳನ್ನು ಕೈಗೊಳ್ಳತಕ್ಕದ್ದು ಮತ್ತು ಕೈಗೊಳ್ಳುವಂತೆ ಮಾಡತಕ್ಕದ್ದು ಎಂಬ ಒಪ್ಪಂದದ ಮೇರೆಗೆ ಸಾಲಗಾರನು ತಯಾರಿಕಾ ಉದ್ದೇಶಗಳಿಗಾಗಿ ಯಂತ್ರೋಪಕರಣ/ವಾಹನವನ್ನು ಬಳಸಲು ಅನುಮತಿ ನೀಡಲಾಗುವುದು. ಪರಂತು, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು ಸದರಿ ಯಂತ್ರೋಪಕರಣ/ವಾಹನವದ ಅಭಾದಿತ ಸ್ವಾಧೀನತೆಯನ್ನು ಕಾಪಾಡಲು ಮತ್ತು ಭದ್ರತೆಯ ಸಂರಕ್ಷಣೆಗಾಗಿ ಅಗತ್ಯಪಡಿಸಬಹುದಾದಂಥ ಹಣವನ್ನು ಬೇಡಿಕೆಯ ಮೇರೆಗೆ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಕೊಡತಕ್ಕದ್ದು ಮತ್ತು ಅದು ಸಂದಾಯವಾಗುವವರೆಗೆ ಸಾಲದ ಖಾತೆಗೆ ಖರ್ಚು ಹಾಕತಕ್ಕದ್ದು ಮತ್ತು ತದನುಸಾರ ಬಡ್ಡಿ ವಿಧಿಸತಕ್ಕದ್ದು.

17. ಸಾಲಗಾರನು, ಬಾಡಿಗೆ, ವಿದ್ಯುತ್ ದರಗಳು, ಮುನಿಸಿಪಲ್ ದರಗಳು ಮತ್ತು ಇತರೆ ಎಲ್ಲಾ ವೆಚ್ಚಗಳನ್ನು ನಿಯತವಾಗಿ ಮತ್ತು ಸಕಾಲದಲ್ಲಿ ಸಂದಾಯಮಾಡತಕ್ಕದ್ದು ಮತ್ತು ದಕ್ಷತೆಯಿಂದ ವ್ಯವಹಾರ ನಿರ್ವಹಿಸತಕ್ಕದ್ದು.

18. ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು ಲಿಖಿತ ಒಪ್ಪಿಗೆಯಿಲ್ಲದೆ ಈ ಸಾಲದ ಮುಂದುವರಿಕೆ ಅವಧಿಯಲ್ಲಿ ಸಾಲಗಾರನು

ಎ) ಸಾಲಗಾರ ಸಂಸ್ಥೆಯ ಬಂಡವಾಳ ಸ್ವರೂಪವನ್ನು ಬದಲಾಯಿಸತಕ್ಕದ್ದಲ್ಲ ಅಥವಾ ಯಾವುದೇ ರೀತಿಯಲ್ಲಿ ವ್ಯತ್ಯಾಸ ಮಾಡತಕ್ಕದ್ದಲ್ಲ.

ಬಿ) ವಿಲೀನ ಅಥವಾ ಪುನರ್ ನಿರ್ಮಾಣದಂಥ ಯಾವುದೇ ಯೋಜನೆಯನ್ನು ಕಾರ್ಯಗೊಳಿಸತಕ್ಕುದಲ್ಲ.

ಸಿ) ವಿಸ್ತರಣೆಯ ಹೊಸ ಯೋಜನ ಅನುಷ್ಠಾನ ಅಥವಾ ಸಂಬಂಧಪಡದ ವ್ಯವಹಾರ ಅಥವಾ ಕೈಗೆತ್ತಿಕೊಳ್ಳತಕ್ಕದ್ದಲ್ಲ;

ಡಿ) ಅರ್ಜಿ ಸಲ್ಲಿಸಿದ ಸಮಯದಲ್ಲಿ ಕೈಗೆತ್ತಿಕೊಂಡ ಮತ್ತು ಹಾಗೆ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ತಿಳಿಸಿದ ಯಾವುದೇ ಇತರ ವಹಿವಾಟು ಇದ್ದಲ್ಲಿ ಅದರ ವ್ಯಾಪ್ತಿ ವಿಸ್ತರಿಸತಕ್ಕುದ್ದಲ್ಲ;

ಇ) ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಸಂದಾಯ ಮಾಡಬೇಕಾಗಿರುವ ಅಸಲು ಕಂತುಗಳು ಮತ್ತು ಬಡ್ಡಿಯನ್ನು ನಿಯತವಾಗಿ ಸಂದಾಯಮಾಡುವುದನ್ನು ಹೊರತುಪಡಿಸಿ ಲಾಭಾಂಶವನ್ನು ಘೋಷಿಸತಕ್ಕದ್ದಲ್ಲ ಅಥವಾ ತೆರಿಗೆಗಳನ್ನು ಕಡಿತಗೊಳಿಸಿದ ತರುವಾಯ ತೆರಿಗೆಗಳನ್ನು ವಿಧಿಸತಕ್ಕುದ್ದಲ್ಲ;

ಎಫ್) ಸಾಲಗಾರ ಅಥವಾ ಸಾಲಗಾರನ ಮಾಲೀಕರು, ಪಾಲುದಾರರು ಅಥವಾ ನಿರ್ದೇಶಕರು ತೊಡಗಿಸುವ ಯಾವುದೇ ಹಣವನ್ನು ಸಾಲದ ಚಾಲ್ತಿ ಅವಧಿಯಲ್ಲಿ ಹಿಂತೆಗೆಯುವುದಾಗಲೀ ಅಥವಾ ಹಿಂತೆಗೆಯಲು ಅನುಮತಿ ನೀಡುವುದಾಗಲೀ ಮಾಡತಕ್ಕದ್ದಲ್ಲ;

ಜಿ) ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಯಾವುದೇ ಹಣ ಬಾಕಿಯಿರುವವರೆಗೆ ಠೇವಣಿಗಳ ಅಥವಾ ಸಾಲಗಳ ರೂಪದಲ್ಲಿ ಸಾಲಗಳ ರೂಪದಲ್ಲಿ ಅಥವಾ ಯಾವುದೇ ಇತರ ಸಂಸ್ಥೆಯಲ್ಲಿ ಷೇರು ಬಂಡವಾಳ ರೂಪದಲ್ಲಿ ಯಾವುದೇ ನಿಧಿಗಳನ್ನು ಹೂಡಿಕೆ ಮಾಡತಕ್ಕುದ್ದಲ್ಲ, ಆದಾಗ್ಯೂ, ಸಾಲಗಾರನು, ವ್ಯವಹಾರದ ಸಾಮಾನ್ಯ ನಿರ್ವಹಣೆಯಲ್ಲಿ ಅಥವಾ ವ್ಯವಹಾರಕ್ಕೆ ಅಗತ್ಯವೆನಿಸಿದಲ್ಲಿ ಮೂರನೇ ಪಕ್ಷಕಾರರಲ್ಲಿ ನಿಧಿಗಳನ್ನು ಭದ್ರತೆಯ ರೂಪದಲ್ಲಿ ಠೇವಣಿ ಇಡಲು ಮುಕ್ತನಾಗಿರುತ್ತಾನೆ.


ಹೆಚ್) ಸಾಲದ ಚಾಲ್ತಿ ಅವಧಿಯಲ್ಲಿ ಯಾವುದೇ ಇತರ ಸಾಲ ಏಜೆನ್ಸಿ ಅಥವಾ ಲೇವಾದೇವಿಗಾರರಿಂದ ಯಾವುದೇ ಬಗೆಯ ಸೌಲಭ್ಯಗಳನ್ನು ಪಡೆಯತಕ್ಕದ್ದಲ್ಲ ಅಥವಾ ತೆಗೆದುಕೊಳ್ಳತಕ್ಕದ್ದಲ್ಲ ಅಥವಾ ಕಂತು ಖರೀದಿ ವ್ಯವಸ್ಥೆಗೆ ಒಪ್ಪಂದ ಮಾಡಿಕೊಳ್ಳತಕ್ಕದ್ದಲ್ಲ.

ಐ) ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಪೂರ್ವ ಸಮ್ಮತಿ ಇಲ್ಲದೆ ಸಾಲಗಾರನ ವ್ಯವಸ್ಥಾಪಕ ಏಜೆನ್ಸಿ ಹುದ್ದೆಯನ್ನು ಯಾವುದೇ ಪಕ್ಷಕಾರನಿಗೆ ವರ್ಗಾಯಿಸತಕ್ಕದ್ದಲ್ಲ ಮತ್ತು ಅದರ ಸ್ವರೂಪ ಅಥವಾ ಅಂಥ ರೀತಿಯ ಎಲ್ಲಾ ಬದಲಾವಣೆಗಳನ್ನು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ನಿಯತವಾಗಿ ತಿಳಿಸತಕ್ಕದ್ದು.

19. ಸದರಿ ಸಾಲದ ಚಾಲ್ತಿ ಅವಧಿಯಲ್ಲಿ ಸದರಿ ಸಾಲದ ಮೇರೆಗೆ ಅಥವಾ ಅದಕ್ಕೆ ಸಮಬಂಧಿಸಿದಂತೆ ತತ್ಕಾಲದಲ್ಲಿ ಬಾಕಿಯಿರುವ ಅಸಲು, ಬಡ್ಡಿ ಮತ್ತು ಇತರೆ ಹಣದ ಮೊತ್ತವು, ತತ್ಕಾಲದಲ್ಲಿ ಒತ್ತೆಯಿಡಲಾದ ಯಂತ್ರೋಪಕರಣ/ ವಾಹನವನ್ನು ಮಾರುಕಟ್ಟೆ ಮೌಲ್ಯದ ಕುಸಿತದಿಂದಾಗಿ ಅಥವಾ ಬೇರೆ ಇತರ ಕಾರಣದಿಂದಾಗಿ ಸದರಿ ಯಂತ್ರೋಪಕರಣ/ ವಾಹನವನ್ನು ಮಾರುಕಟ್ಟೆ ಮೌಲ್ಯಕ್ಕಿಂತ ಶೇ__________________ ರಷ್ಟು ಹೆಚ್ಚಾದಲ್ಲಿ, ಸಾಲಗಾರನು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಕೋರಿಕೆ ಮೇರೆಗೆ ಕೂಡಲೇ ನಗದು ಸಂದಾಯ ಮಾಡತಕ್ಕದ್ದು ಅಥವಾ ಆ ಪ್ರಮಾಣವನ್ನು ಕಡಿಮೆ ಮಾಡಲು ಸಾಕಾಗುವಷ್ಟು ಹೆಚ್ಚಿನ ಅನುಮೋದಿತ ಭದ್ರತೆಯನ್ನು, ಅದು ಸದರಿ ಸಾಲದ ಮೇರೆಗೆ ತತ್ಕಾಲದಲ್ಲಿ ಬಾಕಿಯಿರುವ ಅಥವಾ ಕೊಡಬೇಕಾದ ಅಸಲು, ಬಡ್ಡಿ ಹೊಣೆಗಳು ಮತ್ತು ಇತರ ಹಣಗಳ ಒಟ್ಟು ಮೊತ್ತವು ಶೇ.____________ ರಷ್ಟು ಮಾರುಕಟ್ಟೆ ಮೌಲ್ಯವನ್ನು ಹೊಂದಿರತಕ್ಕದ್ದು, ಠೇವಣಿಯಾಗಿ ಇಡತಕ್ಕದ್ದು ಮತ್ತು ಅದಕ್ಕೆ ತಪ್ಪಿದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು ಆನಂತರದ ಯಾವುದೇ ಸಮಯ ಅಥವಾ ಸಮಯಗಳಲ್ಲಿ (ಮತ್ತು ದಾವೆ ಹೂಡುವ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಹಕ್ಕಿಗೆ ಬಾಧಕವಾಗದಂತೆ) ಈ ಕೆಳಗೆ ನಮೂದಿಸಿದ ರೀತಿಯಲ್ಲಿ ಯಂತ್ರೋಪಕರಣ/ವಾಹನವನ್ನು ಮಾರಾಟ ಮಾಡಿ, ಆ ಮಾರಾಟದ ಉತ್ಪತ್ತಿಯನ್ನು ಸದರಿ ಸಾಲದ ಸಂಬಂಧದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ತತ್ಕಾಲದಲ್ಲಿ ಸಂದಾಯ ಮಾಡಬೇಕಾದ ಅಸಲು, ಬಡ್ಡಿ ಅಥವಾ ಇತರೆ ಹಣಕ್ಕೆ ಅಥವಾ ಯಾವುದೇ ರೀತಿಯ ಇತರ ಲೆಕ್ಕ ಖಾತೆಗೆ ವಿನಿಯೋಗಿಸತಕ್ಕದ್ದು.

20. ಸದರಿ ಯಂತ್ರೋಪಕರಣ/ವಾಹನದ ಅಥವಾ ಕಾರ್ಖಾನೆಯ ಕಟ್ಟಡದಲ್ಲಿರುವ ವಸ್ತುಗಳ ಸುರಕ್ಷಿತ ಅಭಿರಕ್ಷಣೆಗೆ ಅಥವಾ ನೀರು ಅಥವಾ ಶಾಖ ಅಥವಾ ಇತರ ಯಾವುದೇ ಕಾರಣಗಳಿಂದಾಗುವ ನಾಶ ಅಥವಾ ಇತರ ಯಾವುದೇ ಕಾರಣಗಳಿಂದಾಗುವ ನಾಶ ಅಥವಾ ಗುಣಮಟ್ಟದ ದುಸ್ಥಿತಿಗೆ ಅಥವಾ ಕಳ್ಳತನ ಅಥವಾ ಬೇರೆ ರೀತಿಯಿಂದಾಗುವ ನಷ್ಟಕ್ಕೆ ಅಥವಾ ಸದರಿ ಕಾರ್ಖಾನೆಯ ಕಟ್ಟಡ ಮತ್ತು ವಸ್ತುಗಳ ಸಂರಕ್ಷಣೆಗೆ ಅಥವಾ ಕಾರ್ಖಾನೆಯ ಕಟ್ಟಡಗಳನ್ನು ಪಡೆದಿರುವ ಅಥವಾ ಪಡೆಯಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಆಚರಣೆ ಮತ್ತು ಪಾಲನೆಗೆ ಅಥವಾ ಬಾಡಿಗೆ ಸಂದಾಯಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು ಜವಾಬುದಾರವಾಗತಕ್ಕದ್ದಲ್ಲ ಮತ್ತು ಯಂತ್ರೋಪಕರಣ/ವಾಹನವು ಸಾಲಗಾರ ಸ್ವಂತ ಹೊಣೆಯ ಮೇಲಿರತಕ್ಕದ್ದು.

21. ಯಂತ್ರೋಪಕರಣ ವಾಹನದ ಸ್ಥಿತಿ ಗುಣಮಟ್ಟ ಅಥವಾ ಪ್ರಮಾಣಗಳಲ್ಲಿ ಕಾಲಕಾಲಕ್ಕೆ ಸಂಭವಿಸಬಹುದಾದ ಯಾವುದೇ ವ್ಯತ್ಯಾಸಗಳಿಗೆ ಸಂಬಂಧಿಸಿದಂತೆ ಡಾ. ಬಿಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಯಾವುದೇ ಜವಾಬ್ದಾರಿಯನ್ನು ಹೊರಿಸತಕ್ಕದ್ದಲ್ಲ.



22. ಇದರಲ್ಲಿ ಅಥವಾ ಭದ್ರತಾ ದಾಖಲೆಯಲ್ಲಿ ಏನೇ ಒಳಗೊಂಡಿದ್ದರು ಪೂರ್ಣ ಸಾಲವು ಕೂಡಲೇ ಬಾಕಿಯಾಗತಕ್ಕದ್ದು ಮತ್ತು ಸಾಲಗಾರನು ಡಾ. ಬಿಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಸಂದಾಯ ಮಾಡತಕ್ಕದ್ದು ಮತ್ತು ಈ ಮುಂದಿನ ಯಾವುದೇ ಘಟನೆಗಳು ಸಂಭವಿಸಿದ್ದಲ್ಲಿ ಭದ್ರತೆಯನ್ನು ಜಾರಿಗೆಗೊಳಿಸಲು ಡಾ. ಬಿಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಹಕ್ಕಿರತಕ್ಕದ್ದು- ಎಂದರೆ,

ಎ. ಸಂದಾಯದ ಯುಕ್ತ ದಿನಾಂಕ ಮುಕ್ತಾಯವಾದ ನಂತರ ______________________ ರವರೆಗೆ ಅಸಲು ಕಂತು ಸಂದಾಯವಾಗದೆ ಉಳಿದುಕೊಂಡಿರುವುದು.

ಬಿ. ಮೂರು ತಿಂಗಳ ಕಾಲಾವಧಿಯಲ್ಲಿ ಸಂದಾಯವಾಗದೆ ಉಳಿದ ಯಾವುದೇ ಬಡ್ಡಿ ಬಾಕಿಯೂ ನಂತರದಲ್ಲಿ ಆ ಬಗ್ಗೆ ತಗಾದೆ ಇರಲಿ ಅಥವಾ ಇಲ್ಲದಿರಲಿ ಬರಬೇಕಾದ ಹಣವೆಂದು ಪರಿವರ್ತನೆಯಾಗಿರುವುದು.

ಸಿ. ಸಾಲಗಾರನು ಈ ದಾಖಲೆಗಳಲ್ಲಿ ಮತ್ತು /ಅಥವಾ ಭದ್ರತಾ ದಾಖಲೆಗಳಲ್ಲಿ ಅಥವಾ ಸಾಲಕ್ಕೆ ಸಂಬಂಧಿಸಿದ ಯಾವುದೇ ಇತರ ನಿಬಂಧನೆ ಮತ್ತು ಷರತ್ತುಗಳಲ್ಲಿ ಅಡಕವಾಗಿರುವ ಯಾವುದೇ ಅಂಶವನ್ನು ಆಚರಿಸಲು ಅಥವಾ ಪಾಲಿಸಲು ತಪ್ಪುವುದು ಅಥವಾ ಉಲ್ಲಂಘಿಸುವುದು.

ಡಿ. ಸಾಲಗಾರನು ಇತರೆ ಏರ್ಪಾಟಿಗೆ ಒಪ್ಪಂದ ಮಾಡಿಕೊಳ್ಳುವುದು ಅಥವಾ ಸಾಲಗಾರನ ಸಾಲಗಳ ಬಗ್ಗೆ ರಾಜಿ ಮಾಡಿಕೊಳ್ಳುವುದು ಅಥವಾ ದಿವಾಳಿತನ ಕೃತ್ಯದಲ್ಲಿ ಭಾಗಿಯಾಗುವುದು.

ಇ. ಸಾಲಗಾರನ, ಸ್ವತ್ತಿನ ಪೂರ್ಣ ಅಥವಾ ಯಾವುದೇ ಭಾಗದ ವಿರುದ್ಧ ನಿರ್ವಹಣೆ ಅಥವಾ ಜಪ್ತಿ ಅಥವಾ ವಸೂಲಿಯನ್ನು ಜಾರಿಗೊಳಿಸಿರುವುದು.

ಎಫ್. ಸಾಲಗಾರನ, ಸಮಾಪನೆಯಲ್ಲಿ ತೊಡಗುವುದು (ವಿಲೀನ ಅಥವಾ ಪುನರ್ ನಿರ್ಮಾಣದ ಉದ್ದೇಶಕ್ಕಾಗಿ ಹೊರತುಪಡಿಸಿ).

ಜಿ. ಸಾಲಗಾರನು, ಒಂದು ಫರ್ಮ್ ಆಗಿದ್ದಲ್ಲಿ, ಅದರ ಯಾರೇ ನಿರ್ದೇಶಕರನ್ನು ದಿವಾಳಿ ಎಂದು ನ್ಯಾಯ ನಿರ್ಣಯಿಸಿರುವುದು ಅಥವಾ ದಿವಾಳಿ ಋಣಿಗಳ ಪರಿಹಾರಕ್ಕಾಗಿ ಯಾವುದೇ ಕಾನೂನಿನ ಲಾಭ ಪಡೆದಿರುವುದು .

ಹೆಚ್. ಸಾಲಗಾರನ ಪೂರ್ಣ ಅಥವಾ ಯಾವುದೇ ಭಾಗದ ಸ್ವತ್ತಿಗೆ ಸಂಬಂಧಿಸಿ ದಂತೆ ರಿಸೀವರ್ ನನ್ನು ನೇಮಕ ಮಾಡುತ್ತಿರುವುದು.

ಐ. ಸಾಲಗಾರನು ವ್ಯವಹಾರ ನಿರ್ವಹಣೆಯನ್ನು ಮುಕ್ತಾಯಗೊಳಿಸುವುದು ಅಥವಾ ಮುಕ್ತಾಯಗೊಳಿಸುವ ಬೆದರಿಕೆ ಹಾಕುವುದು.

ಜೆ. ಡಾ. ಬಿಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ನೀಡಿರುವ ಭದ್ರತೆಗೆ ಬಾದಕವಾಗುವ ದುರ್ಬಲಗೊಳಿಸುವ ಅಥವಾ ಗಂಡಾಂತರ ಉಂಟು ಮಾಡುವ ಅಥವಾ ಮೌಲ್ಯ ಕಡಿಮೆಗೊಳಿಸುವ ಅಥವಾ ಅದಕ್ಕೆ ಬಾದಕವಾಗುವ ದುರ್ಬಲಗೊಳಿಸುವ ಅಥವಾ ಗಂಡಾಂತರ ಉಂಟು ಮಾಡುವ ಅಥವಾ ಮೌಲ್ಯ ಕಡಿಮೆಗೊಳಿಸುವ ಸಂಭವ ಯಾವುದೇ ಸಂದರ್ಭ ಘಟಿಸುವುದು.

ಕೆ. ಸಾಲಗಾರನ ಮರು ಸಂದಾಯ ಸಾಮರ್ಥ್ಯವನ್ನು ಯಾವುದೇ ರೀತಿಯಲ್ಲಿ ದುರ್ಬಲಗೊಳಿಸುವ ಅಥವಾ ವ್ಯತಿರಿಕ್ತಗೊಳಿಸುವ ಯಾವುದೇ ಘಟನೆ ಅಥವಾ ಸಂದರ್ಭ ಅಥವಾ ದುರ್ಬಲಗೊಳಿಸುವ ಅಥವಾ ವ್ಯತಿರಿಕ್ತಗೊಳಿಸುವಂತಹ ಸಂಭವ ಇರುವ ಯಾವುದೇ ಘಟನೆ ಅಥವಾ ಸಂದರ್ಭ ಘಟಿಸುವುದು.

ಮೇಲ್ಕಂಡ ಘಟನೆಗಳಲ್ಲಿ ಯಾವುದೇ ಘಟನೆ ಸಂಭವಿಸಿದರು ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ತೀರ್ಮಾನ ಅಂತಿಮವಾಗಿರತಕ್ಕದ್ದು ಮತ್ತು ಸಾಲಗಾರನು ಅದಕ್ಕೆ ಬದ್ಧನಾಗಿರತಕ್ಕದ್ದು ಪರಂತು ಯಾವಾಗಲೂ ಮೇಲೆ ಹೇಳಿದ ಯಾವುದೇ ಘಟನೆಗಳು ಸಂಭವಿಸಿದಾಗ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ತನ್ನ ವಿವೇಚನಾ ಅನುಸಾರ ಈ ಭದ್ರತೆಯ ಮೇರೆಗೆ ತನ್ನ ಹಕ್ಕುಗಳನ್ನು ಕೂಡಲೇ ಜಾರಿಗೆ ಗೊಳಿಸದೆ ಇರಬಹುದು.

23. ಖಂಡ 5 ರಲ್ಲಿ ನಮೂದಿಸಿದಂತೆ ಸಂದಾಯ ಮಾಡಲು ತಪ್ಪಿದಲ್ಲಿ ಅಥವಾ ಮೇಲ್ಕಾಣಿಸಿದ ಖಂಡ 19 ಮತ್ತು 22ರ ಮೇರೆಗೆ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು ಅದರ ಭದ್ರತೆಯನ್ನು ಜಾರಿಗೊಳಿಸಿದಲ್ಲಿ, ಅಂಥ ಕರ್ತವ್ಯಲೋಪ ಮಾಡಿದ ನಂತರದ ಯಾವುದೇ ಸಮಯದಲ್ಲಿ ಮತ್ತು ಸಾಲಗಾರನಿಗೆ ಯುಕ್ತ ತಿಳುವಳಿಕೆ ನೀಡಿದ ತರುವಾಯ (ಸಾಲಗಾರನ ವಿರುದ್ಧ ದಾವೆ ಹೂಡುವ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಹಕ್ಕಿಗೆ ಬಾಧಕವಾಗದಂತೆ) ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು ಬಹಿರಂಗವಾಗಿ ಹರಾಜು ಮೂಲಕವಾಗಲೀ ಅಥವಾ ಖಾಸಗೀ ಒಪ್ಪಂದದ ಮೂಲಕವಾಗಲೀ ಮತ್ತು ಒಂದು ಲಾಡಿನಲ್ಲಾಗಲಿ ಅಥವಾ ಪ್ರತ್ಯೇಕವಾಗಲಿ ಅಥವಾ ಬೇರೆ ರೀತಿಯಿಂದಾಗಲೀ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಒತ್ತೆಯಿಟ್ಟಿರುವ ಭದ್ರತೆಯನ್ನು ಅಥವಾ ಅದರ ಭಾಗವನ್ನುವಿಲೇ ಮಾಡಿ ಅಂಥ ಮಾರಾಟದ ಉತ್ಪತ್ತಿಯನ್ನು ಸಂದಾಯವಾಗದ ಅವಧಿಯ ಸಾಲದ ಶಿಲ್ಕು, ಅದರ ಜೊತೆಗೆ ಸಂದಾಯ ಮಾಡಲು ತಪ್ಪಿದ ದಿನಾಂಕದಿಂದ ಲೆಕ್ಕ ಖಾತೆಗೆ ವಿಧಿಸಿದ ಬಡ್ಡಿಗಿಂತ ಶೇ.2 ರಷ್ಟು ಹೆಚ್ಚಿಸಿದ ಬಡ್ಡಿಯನ್ನು ತುಂಬಿಕೊಡಲು ವಿನಿಯೋಗಿಸುವುದು.

24. ಸಾಲಗಾರನು, ಅಂಥ ಮಾರಾಟದ ಬಗೆಗಿನ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಲೆಕ್ಕವನ್ನು ಅಥವಾ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಯಾರೇ ಅಧಿಕಾರಿ ಸಹಿ ಮಾಡಿದ ಪ್ರಯತ್ನಿತ ಮಾರಾಟವನ್ನು ಮಾರಾಟದ ಮೂಲಕ ಸ್ವೀಕರಿಸಿದ ಹಣ ಮತ್ತು ಅಂಥ ಮಾರಾಟದ ಸಂಬಂಧದಲ್ಲಿನ ವೆಚ್ಚಗಳಿಗೆ ಪರ್ಯಾಪ್ತವೆಂದು ಒಪ್ಪಿಕೊಳ್ಳತಕ್ಕದ್ದು, ಅಂಥ ಮಾರಾಟದಿಂದ ಸಾಲಗಾರನಿಗೆ ಪರಿಣಮಿಸಬಹುದಾದ ಯಾವುದೇ ನಷ್ಟ ಅಥವಾ ಕೊರತೆಗೆ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು ಹೊಣೆಯಾಗತಕ್ಕದ್ದಲ್ಲ.

25. ಮಾರಾಟ ಉತ್ಪತ್ತಿಯ ಯಾವುದೇ ಶಿಲ್ಕು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ವಶದಲ್ಲಿರತಕ್ಕದ್ದು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು ಮೇಲೆ ಹೇಳಿದಂತೆ ಅದರಿಂದ ಸಂದಾಯ ಮಾಡಿದ ತರುವಾಯ ಅದನ್ನು ಈ ಭದ್ರತೆಯಿಂದ ಪ್ರತ್ಯೇಕವಾದ ಮತ್ತು ಸುಸ್ಪಷ್ಟವಾದ ಯಾವುದೇ ಇತರ ವ್ಯವಹಾರಗಳು ಅಥವಾ ಇತರ ಲೆಕ್ಕ ಖಾತೆಯ ಮೇರೆಗೆ ಸಾಲಗಾರನು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಕೊಡಬೇಕಾದ ಯಾವುದೇ ಮೊತ್ತ ಅಥವಾ ಹಣದ ಮೊತ್ತಕ್ಕೆ ಸರಿದೂಗಿಸಿ ಅಂತಿಮವಾಗಿ ಸಾಲಗಾರನ ವಿರುದ್ಧ ಡಾ. ಬಿಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದ ಎಲ್ಲಾ ಕ್ಲೇಮುಗಳನ್ನು ಇತ್ಯರ್ಥ ಗೊಳಿಸಿದ ನಂತರ ಉಳಿಯುವ ಯಾವುದೇ ಹೆಚ್ಚುವರಿಯನ್ನು ಸಾಲಗಾರನಿಗೆ ಡಾ. ಬಿಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ ನೀಡುವುದು ಪರಂತು ಯಾವಾಗಲೂ ಇದರಲ್ಲಿ ಒಳಗೊಂಡಿರುವ ಯಾವುದಾದರೂ ಸಾಲಗಾರನಿಂದ ತತ್ಕಾಲದಲ್ಲಿ ಸಾಲದ ಮೇರೆಗೆ ಅಥವಾ ಯಾವುದೇ ಇತರ ಕಾರಣದಿಂದ ಬಾಕಿ ಇರುವ ಶಿಲ್ಕನ್ನು ಒತ್ತೆ ಇಟ್ಟಿರುವ ಎಲ್ಲಾ ಅಥವಾ ಯಾವುದೇ ಯಂತ್ರೋಪಕರಣ/ ವಾಹನವನ್ನು ಮಾರಾಟ ಮಾಡಿದ್ದಾಗ್ಯೂ ಅಥವಾ ಹಣ ಸ್ವೀಕರಿಸದಿದ್ದಾಗ್ಯೂ ವಸೂಲಿ ಮಾಡುವ ಡಾ. ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದ ಹಕ್ಕುಗಳನ್ನು (ಅಂತ ಹಕ್ಕುಗಳನ್ನು ಡಾ. ಬಿ .ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ ಹೊಂದಿರತಕ್ಕದ್ದು ಎಂದು ಈ ಮೂಲಕ ಒಪ್ಪಲಾಗಿದೆ) ನಕಾರಾತ್ಮಗೊಳಿಸುವುದು, ಅನರ್ಹಗೊಳಿಸುವುದು ಅಥವಾ ಬಾಧಕಗೊಳಿಸುವುದು ಅಥವಾ ಪರಿಣಾಮ ಬೀರುವುದು ಎಂದು ಭಾವಿಸತಕ್ಕದ್ದಲ್ಲ.

26. ಸಾಲಗಾರನು, ಎಲ್ಲಾ ಲೆಕ್ಕಗಳ ಮೇರೆಗೆ ಡಾ. ಬಿಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಕೊಡಬೇಕೆ ಕೊಡಬೇಕಾಗಿರುವ ಮೇಲೆ ಹೇಳಿದಂತಹ ಎಲ್ಲಾ ಹಣ, ಸಾಲಋಣತ್ವ ಮತ್ತು ಹೊಣೆಗಾರಿಕೆಗಳಿಗೆ ಈ ಒಪ್ಪಂದವು ಮುಂದುವರೆದ ಭದ್ರತೆ ಎಂದು ಕಾರ್ಯನಿರ್ವಹಿಸತಕ್ಕದ್ದು.

27. ಈ ಒಪ್ಪಂದದಲ್ಲಿ ಒಳಗೊಂಡಿರುವ ಯಾವುದೂ, ಯಾವುದೇ ಲೆಕ್ಕದ ಮೇರೆಗೆ ಡಾ. ಬಿಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಬರಬೇಕಾದ ಬಾಕಿ ಶಿಲ್ಕು ಅಥವಾ ಡಾ. ಬಿ.ಆರ್ .ಅಂಬೇಡ್ಕರ್ ಅಭಿವೃದ್ಧಿ ನಿಗಮವು ತತ್ಕಾಲದಲ್ಲಿ ಪಡೆದಿರುವಂತ ಸಂವಾದಿ ಭದ್ರತೆಗಿಂತ ಹೆಚ್ಚಾದ ಯಾವುದೇ ರೀತಿಯ ಹೊಣೆಗಾರಿಕೆಗೆ ಸಂಬಂಧಿಸಿದಂತೆ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಸಾಮಾನ್ಯ ಧಾರಣಾಧಿಕಾರವನ್ನು ಬಿಟ್ಟು ಕೊಡುವುದೆಂದು ಅರ್ಥೈಸತಕ್ಕದ್ದಲ್ಲ.

28. ಇದರಲ್ಲಿ ಯಾವುದು, ಯಾವುದೇ ಇತರ ಪ್ರಸ್ತುತ ಅಥವಾ ಮುಂದಿನ ಭದ್ರತೆ, ಕಾತರಿ ಭದ್ರತೆ ಅಥವಾ ಯಾವುದೇ ಸಾಲದ ಮೇಲೆ ಡಿಕ್ರಿ ಅಥವಾ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕಾಗಿ ಸಾಲಗಾರನ ಹೊಣೆ ಇವುಗಳಿಗೆ ಸಂಬಂಧಿಸಿದಂತೆ ಡಾ. ಬಿ.ಆರ್ .ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕಿರುವ ಯಾವುದೇ ಹಕ್ಕುಗಳಿಗೆ ಬಾಧಕವಾಗತಕ್ಕದ್ದಲ್ಲ.

29. ಒಂದು ವೇಳೆ ಸಾಲಗಾರನು ಒಬ್ಬ ವ್ಯಕ್ತಿಗಿಂತ ಹೆಚ್ಚಾಗಿದ್ದಲ್ಲಿ ಎಲ್ಲರೂ ಈ ಮೂಲಕ ಜಂಟಿಯಾಗಿ ಅಥವಾ ಪ್ರತ್ಯೇಕವಾಗಿ ಇದಕ್ಕೆ ಬದ್ಧರಾಗಿರತಕ್ಕದ್ದು ಮತ್ತು ಅವನು ಫರ್ಮ್ ಆಗಿದ್ದಲ್ಲಿ, ಅಥವಾ ಫರ್ಮ್ ನ ಸದಸ್ಯರಾಗಿದ್ದಲ್ಲಿ ಅದರ ಸ್ವರೂಪ ಅಥವಾ ರೀತಿಯಲ್ಲಿ ಕಾಲಕಾಲಕ್ಕೆ ಏನೇ ವ್ಯತ್ಯಾಸಗಳು ಇದ್ದಾಗ್ಯೂ ಮತ್ತು ಅಂತ ಫರ್ಮ್ ಯಾವುದೇ ಸಮಯದಲ್ಲಿ ಏಕವ್ಯಕ್ತಿಯನ್ನು ಒಳಗೊಂಡಿದ್ದರು ಅಥವಾ ಏಕವ್ಯಕ್ತಿಗೆ ಇಳಿದಾಗ್ಯೂ, ಎಲ್ಲಾ ಸದಸ್ಯರು ಈ ಮೂಲಕ ಜಂಟಿಯಾಗಿ ಅಥವಾ ಪ್ರತ್ಯೇಕವಾಗಿ ಬದ್ಧರಾಗತಕ್ಕದ್ದು. ಸಾಲಗಾರನು ಒಬ್ಬ ವ್ಯಕ್ತಿಗಿಂತ ಹೆಚ್ಚು ಇದ್ದಲ್ಲಿ, ಯಾವುದೇ ಸಮಯದಲ್ಲಿ, ಯಾವುದೇ ಅಂತ ವ್ಯಕ್ತಿಗಳಲ್ಲಿ ಒಬ್ಬರಿಗೆ ನೋಟಿಸನ್ನು ಜಾರಿಗೊಳಿಸಿದರೆ, ಅಂಥ ನೋಟೀಸು, ಅಂಥ ಎಲ್ಲಾ ಸದಸ್ಯರಿಗೂ ಜಾರಿಗೊಳಿಸಲಾಗಿದೆ ಎಂದು ಭಾವಿಸತಕ್ಕದ್ದು.

30. ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮವು ಸಾಲಗಾರನಿಗೆ ವಿಧಿಸಬೇಕೆಂದಿರುವ ಋಣಭಾರ ಇಂಗಿತದ ಬಗ್ಗೆ, ಯಾವುದೇ ಸಮಯದಲ್ಲಿ ಸಾಲಗಾರನಿಗೆ ನೋಟಿಸ್ ನೀಡಲು ಅದು ಅಧಿಕಾರ ಹೊಂದಿರತಕ್ಕದ್ದು ಆನಂತರದಲ್ಲಿ, ಡಾ. ಬಿಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮವು ಈ ಮೊದಲೇ ಇದರಲ್ಲಿ ನಮೂದಿಸಿದ ಬಡ್ಡಿಗಿಂತ ಅದು ನಿರ್ದಿಷ್ಟ ಪಡಿಸಬಹುದಾದ ಹೆಚ್ಚಿನ ಬಡ್ಡಿಯನ್ನು ವಿಧಿಸಬಹುದು.

ಇದಕ್ಕೆ ಸಾಕ್ಷಿಯಾಗಿ ಸಾಲಗಾರನು/ರು____________________ ವರ್ಷದ__________________

ತಿಂಗಳ______________ ದಿನವಾದ ಇಂದು ಈ ದಾಖಲೆಗಳಲ್ಲಿ ಸಹಿ ಮಾಡಿರುತ್ತಾರೆ.

ಸಾಲಗಾರನ/ರ ಸಹಿ

**<u>ಅನುಸೂಚಿ "ಎ"</u>**

<u>ಇತರೆ ಭದ್ರತಾ ದಾಖಲೆಗಳ ಸಂಕ್ಷಿಪ್ತ ವಿವರಗಳು</u>

| ದಾಖಲೆಯ ದಿನಾಂಕ | ಸಂಕ್ಷಿಪ್ತ ವಿವರಣೆ | ಈ ಸಾಧನದ ಮೂಲಕ ಪಡೆಯಲಾದ ಸ್ವತ್ತುಗಳ ಸಂಕ್ಷಿಪ್ತ ವಿವರಗಳು |
|---|---|---|
| | | |

ಅನುಸೂಚಿ "ಬಿ"

ಆಧಾರ ಮಾಡಲಾದ/ ಒತ್ತೆಯಿಡಲಾದ ಯಂತ್ರೋಪಕರಣ/ವಾಹನದ ವಿವರಗಳು

| ಕ್ರ.ಸಂ | ವಿವರಣೆ (ಇಂಜಿನ್ ಸಂಖ್ಯೆ, ನೋಂದಣಿ ಸಂಖ್ಯೆ, ಯಾವುದೇ ಇದ್ದಲ್ಲಿ) | ಖರೀದಿ ಪಟ್ಟಿ ಮೌಲ್ಯ/ಮಾರುಕಟ್ಟೆ ಮೌಲ್ಯ | ಇರುವ/ಸ್ಥಾಪಿಸಿದ ದಾಸ್ತಾನು ಮಾಡಲಾದ ಸ್ಥಳ |
|---|---|---|---|
| | | | |

# ಅನುಬಂಧ-6
# Annexure-6

## ಖಾತರಿ ಪತ್ರ
## (LETTER OF GUARANTEE)

ಇಂದ:

ಸ್ಥಳ:

ದಿನಾಂಕ:

ಗೆ,
ವ್ಯವಸ್ಥಾಪಕ ನಿರ್ದೇಶಕರು,ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ,ಬೆಂಗಳೂರು.

ಮಾನ್ಯರೇ,

1. ನನ್ನ/ನಮ್ಮ ಕೋರಿಕೆಯ ಸಾಲಗಳು ಮತ್ತು ಮುಂಗಡಗಳನ್ನು ನೀವು ಮಂಜೂರು ಮಾಡುವ ಮತ್ತು ಸಾಲಗಳು ಹಾಗೂ ಮುಂಗಡಗಳ ಮಂಜೂರಾತಿಯನ್ನು ಮುಂದುವರಿಸುವ ಸಂಬಂಧದಲ್ಲಿ ಅಥವಾ ಅನ್ಯಥಾ__________.20__________ ದಿಂದ ನೀವು ನಿರ್ಧರಿಸುವವರೆಗೆ ಸಾಲದ ರೂಪದಲ್ಲಿ ಮುಂಗಡವಾಗಿ ಹಣವನ್ನು ಸಾಲ ಕೊಡುವ ಮೂಲಕವಾಗಲಿ ಅಥವಾ ಬೇರೆ ರೀತಿಯಲ್ಲಾಗಲಿ__________ __________ ರವರ ಹೆಸರಿನಲ್ಲಿ (ಇದರಲ್ಲಿ ಇನ್ನು ಮುಂದೆ ಪ್ರಧಾನ ಸಾಲಗಾರನೆಂದು ಕರೆಯಲಾಗಿದೆ ) ಸಾಲ ನೀಡುವ ಅಥವಾ ಉದ್ದರಿ ಪತ್ರವನ್ನು ತೆರೆಯುವ ಸಂಬಂದದಲ್ಲಿ, ಈ ಕೆಳಗೆ ಸಹಿ ಮಾಡಿರುವ__________ __________ ವಿಳಾಸದಲ್ಲಿ ವಾಸವಾಗಿರುವ__________ ವರ್ಷ ವಯಸ್ಸಿನ __________ ಇವರ

ಮಗ/ಮಗಳು /ಹೆಂಡತಿಯಾದ__________ ____________________ ಎಂಬ ನಾನು ಏಕಮಾತ್ರವಾಗಿ /ಜಂಟಿಯಾಗಿ/ಪ್ರತ್ಯೇಕವಾಗಿ _________ ____________________ ರೂ.ಗಳ ಮೊಬಲಗನ್ನು ಮೀರದಿರುವ ಮೊಬಲಗಿನ (____________ ______________________________ ರೂಪಾಯಿಗಳು) ಸಂದಾಯಕ್ಕೆ ಹಾಗೂ ಎಲ್ಲಾ ರೀತಿಯ ಹಣದ ಸಂದಾಯಕ್ಕೆ ಖಾತರಿಯನ್ನು ನೀಡುತ್ತಿದ್ದೇನೆ. ಎಲ್ಲಾ ಹಣ ಎಂಬ ಪದದಲ್ಲಿ ಅಂತಹ ಪ್ರಧಾನ ಸಾಲಗಾರನಿಗೆ ಈಗಾಗಲೇ ಮುಂಗಡ ನೀಡಿ ಸಂದಾಯ ಮಾಡಲಾಗಿರುವ ಹಣದ ಸಂಬಂಧದಲ್ಲಿ ಅಥವಾ ಅಂತಹ ಪ್ರಧಾನ ಸಾಲಗಾರನಿಗಾಗಿ ನೀವು ಭರಿಸಿದ ಯಾವುದೇ ಋಣದ ಸಂಬಂಧದಲ್ಲಿ ಅಥವಾ ಬಳಕೆ ಅಥವಾ ಅನುಕೂಲಕ್ಕಾಗಿ ಅಥವಾ ಪ್ರಧಾನ ಸಾಲಗಾರನ ಸಾಲದ ಮೇಲೆ ಅಥವಾ ಅದಕ್ಕೆ ಸಂಬಂಧಿಸಿದ ಇತರೆ ಯಾವುದೇ ಲೆಕ್ಕ/ಗಳ ಮೇಲೆ ನೀವು ಯಾವುದೇ ಸಮಯದಲ್ಲಿ ಮುಂಗಡ ನೀಡಬಹುದಾದ ಯಾವುದೇ ಹಣದ ಅಥವಾ ನೀವು ಮಾಡಬಹುದಾದ ಸಂದಾಯ ಅಥವಾ ಋಣದ ಸಂಬಂದದಲ್ಲಿ ಬಾಕಿ ಇರುವ ಅಥವಾ ಬರಬೇಕಾಗಿರುವ ಎಲ್ಲಾ ಬಡ್ಡಿಯೂ ಸೇರಿರತಕ್ಕದ್ದು. ಇದಕ್ಕಾಗಿ ನಿಮಗೆ ಋಣಿಯಾಗಿರುವ ಇತರರೊಂದಿಗೆ ಪ್ರಧಾನ ಸಾಲಗಾರನು ಏಕಮಾತ್ರವಾಗಿ/ ಜಂಟಿಯಾಗಿ ಋಣಿಯಾಗಿರತಕ್ಕದ್ದು.

2. ನಾನು/ನಾವು, ಈ ಖಾತರಿಯು ಈ ಮೊದಲು ಹೇಳಲಾದ ಅವಧಿಗೆ ಅದರ ಮೇಲಿನ ಬಡ್ಡಿ ಮತ್ತು ದರಗಳ ಜೊತೆಗೆ ಸದರಿ ಲೆಕ್ಕದ/ಲೆಕ್ಕಗಳ ಮೇಲೆ ಬರಬೇಕಾಗಿರುವ ಇಡೀ ಬಾಕಿಯ ಮೇಲೆ ಕಾಲ ಕಾಲಕ್ಕೆ ಈ ಹಿಂದೆ ಹೇಳಿದಂತೆ ಸದರಿ

____________________

ರೂ.ಗಳ(______________________________ ರೂಪಾಯಿಗಳು) ಮೊಬಲಗನ್ನು ಮೀರದಿರುವ ಯಾವುದೇ ಮೊಬಲಗಿಗಾಗಿ ನಿಮಗೆ ಮುಂದುವರೆಯಿತ್ತಿರುವ ಖಾತರಿಯಾಗಿರುತ್ತದೆಂದು ಮತ್ತು ಕಾಲ ಕಾಲಕ್ಕೆ ಸದರಿ ಯಾವುದೇ ಅಥವಾ ಎಲ್ಲಾ ಲೆಕ್ಕದ /ಲೆಕ್ಕಗಳ ಮೇಲೆ ಒಡೆತನ ಹೊಂದಿರಬಹುದು ಅಥವಾ ಹೊಂದಿಲ್ಲದಿರಬಹುದು ಅಥವಾ ಅದನ್ನು ಕಾಲ ಕಾಲಕ್ಕೆ ಸಾಲಕ್ಕೆ ತೆಗೆದುಕೊಳ್ಳಬಹುದೆಂದು ಸ್ಪಷ್ಟವಾಗಿ ಘೋಷಿಸುತ್ತೇನೆ/ವೆ.

3. ಈ ಲಿಖಿತ ಪತ್ರದಡಿಯಲ್ಲಿ ನನ್ನ/ನಮ್ಮ ಹೊಣೆಗಾರಿಕೆಯು ನಾನು/ನಾವು ಈ ಲಿಖಿತ ಪತ್ರವನ್ನು ಮುಂದುವರೆಸದಿರುವ ಮತ್ತು ಕೊನೆಗಾಣಿಸುವ ನನ್ನ/ನಮ್ಮ ಉದ್ದೇಶದ ನೋಟಿಸ್ ಅನ್ನು ಲಿಖಿತದಲ್ಲಿ ತಮಗೆ ನೀಡಿದ ಅಥವಾ ಕಳುಹಿಸಿದ ನಂತರದ ಮತ್ತು ಅಂತಹ ನೋಟಿಸಿನ ಮುಕ್ತಾಯಕ್ಕೆ ಬಾಕಿಯಿರುವ ನನ್ನ/ನಮ್ಮ ಹೊಣೆಗಾರಿಕೆಯ ಪರಿಮಿತಿವರೆಗೆ ಎಲ್ಲಾ

ಹಣವನ್ನು ನಿಮಗೆ ಸಂದಾಯ ಮಾಡಿದ ನಂತರದ ಮೂರು ಕ್ಯಾಲೆಂಡರ್ ತಿಂಗಳುಗಳವರೆಗೆ ಸಂಪೂರ್ಣವಾಗಿ ಜಾರಿಯಲ್ಲಿರತಕ್ಕದ್ದು ಮತ್ತು ನಾನು/ಎಲ್ಲರೂ ಅಥವಾ ನಮ್ಮಲ್ಲಿ ಯಾರಾದರೊಬ್ಬರು ಮರಣ ಹೊಂದಿದಲ್ಲಿ ಅಥವಾ ಯಾವುದೇ ಕಾನೂನು ಸಮ್ಮತ ಅಂಗವಿಕಲತೆಯಿಂದ ನರಳುತ್ತಿದ್ದರೆ, ನಮ್ಮಲ್ಲಿ ಬದುಕುಳಿದಿರುವವರ ಅಥವಾ ಬದುಕುಳಿದಿರುವವನ ಮತ್ತು ಮೃತ ಖಾತರಿದಾರನ ಎಸ್ಟೇಟ್(ಗಳ) ಮತ್ತು ಕಾರ್ಯನಿರ್ವಹಕರು, ಆಡಳಿತಾಧಿಕಾರಿಗಳು ಅಥವಾ ಕಾನೂನು ಸಮ್ಮತ ಪ್ರತಿನಿಧಿಗಳ ಹೊಣೆಗಾರಿಕೆಯು ಈ ಲಿಖಿತ ಪತ್ರವನ್ನು ನಿರ್ಧರಿಸಲು ಅಂತಹ ಬದುಕುಳಿದಿರುವವರ ಹಾಗೂ ಅಂತಹ ಮೃತ ಖರೀದಿದಾರನ ಕಾರ್ಯನಿರ್ವಹಕರು, ಆಡಳಿತಾಧಿಕಾರಿಗಳು ಅಥವಾ ಕಾನೂನು ಪ್ರತಿನಿಧಿಗಳ ಮೂಲಕ ನಿಮಗೆ ನೀಡಲಾದ ಲಿಖಿತ ನೋಟಿಸ್ ನ ಮೂರು ಕ್ಯಾಲೇಂಡರ್ ತಿಂಗಳುಗಳ ಮುಕ್ತಾಯದ ವರೆಗೆ ಮುಂದುವರೆಯತಕ್ಕದ್ದು ಮತ್ತು ನೀವು ಸದರಿ ಮೂರು ಕ್ಯಾಲೇಂಡರ್ ತಿಂಗಳುಗಳ ಅವಧಿಯೊಳಗಾಗಿ ಯಾವುದೇ ಸಮಯದಲ್ಲಿ ಅಂತ್ತಹ ನೋಟಿಸ್ ಸ್ವೀಕೃತಿಯ ಮೇಲೆ ಪ್ರಧಾನ ಸಾಲಗಾರನಿಗಾಗಿ ಹೊಸ ಖಾತೆ ಅಥವಾ ಖಾತೆಗಳನ್ನು ತೆರೆಯುವ ಮತ್ತು ಅಂತ್ತಹ ಪ್ರಧಾನ ಸಾಲಗಾರನು ತರುವಾಯ ನಿಮಗೆ ಮಾಡಿದ ಎಲ್ಲಾ ಸಂದಾಯಗಳನ್ನು ಅದಕ್ಕೆ ವಿನಿಯೋಗಿಸುವ ಸ್ವಾತಂತ್ರ್ಯವನ್ನು ಹೊಂದಿರತಕ್ಕದ್ದು ಮತ್ತು ಈ ಹಿಂದೆ ಹೇಳಿರುವಷ್ಟರ ಮಟ್ಟಿಗೆ ಈ ಲಿಖಿತ ಪತ್ರದಡಿಯ ನನ್ನ/ನಮ್ಮ ಹೊಣೆಗಾರಿಕೆಗೆ ಯಾವುದೇ ರೀತಿಯ ಭಾಧಕವಾಗದೆ ಹಳೆಯ ಖಾತೆ ಅಥವಾ ಖಾತೆಗಳಿಗೆ ಅಂತಹ ಪ್ರಧಾನ ಸಾಲಗಾರನು ವ್ಯಕ್ತವಾಗಿ ವಿನಿಯೋಗಿಸಬಾರದು.

4. ನಾನು/ನಾವು ಪ್ರಧಾನ ಸಾಲಗರನೊಂದಿಗಿನ ನಿಮ್ಮ ಒಪ್ಪಂದಕ್ಕನುಸಾರವಾಗಿ ನೀವು ಸೂಕ್ತವೆಂದು ಭಾವಿಸಬಹುದಾದಂತ್ತಹ ಯಾವುದೇ ವ್ಯತ್ಯಾಸವನ್ನು ನೀವು ಮಾಡಲು, ಆತನಿಗೆ/ಅವರಿಗೆ ನೀವು ಯಾವುದೇ ಸಾಲವನ್ನು ನಿರ್ಧರಿಸಲು, ವಿಸ್ತರಿಸಲು ಅಥವಾ ಬದಲಾಯಿಸಲು ನೀವು ಆತನೊಂದಿಗೆ/ಅವರೊಂದಿಗೆ ಯಾವುದೇ ಒಡಂಬಡಿಕೆ ಮಾಡಿಕೊಳ್ಳಲು ಅಥವಾ ಆತನಿಗೆ/ಅವರಿಗೆ ಸಮಯವನ್ನು ನೀಡುವ ವಚನವನ್ನು ನೀಡಲು ಅಥವಾ ಆತನ/ಅವರ ಮೇಲೆ ಯಾವುದೇ ದಾವೆಯನ್ನು ಹೂಡದಿರಲು ಮತ್ತು ಖಾತರಿಯುಳ್ಳ ಋಣಕ್ಕಾಗಿ ನೀವು ಹೊಂದಿರಬಹುದಾದಂತಹ ಯಾವುದೇ ಭದ್ರತೆಯೊಂದಿಗೆ ನಿಮ್ಮ ಭಾಗವಾಗಿರಲು ಈ ಮೂಲಕ ಒಪ್ಪಿರುತ್ತೇನೆ/ವೆ. ಪ್ರಧಾನ ಸಾಲಗಾರನನ್ನು ನೀವು ವಿಮೋಚನೆಗೊಳಿಸುವ ಮೂಲಕ ಅಥವಾ ಪ್ರಧಾನ ಸಾಲಗಾರನನ್ನು ಬಿಡುಗಡೆ ಮಾಡಬಹುದಾದಂತಹ ಕಾನೂನು ಪರಿಣಾಮವನ್ನು ನಿಮ್ಮ ಯಾವುದೇ ಕೃತ್ಯದ ಮೂಲಕ ಅಥವಾ ಈ ಪ್ರಸ್ತುತ ಉಪಬಂಧದಲ್ಲಿರದಿದ್ದಲ್ಲಿ, ಜಾಮೀನುದಾರರಾಗಿ ನಿಮ್ಮ ಹಕ್ಕುಗಳಿಗೆ ಅಸಂಗತವಾಗಿರುವಂತಹ ನಿಮ್ಮ ಯಾವುದೇ ಕೃತ್ಯದ ಮೂಲಕ ಅಥವಾ ಈ ಪ್ರಸ್ತುತ ಉಪಬಂಧದಲ್ಲಿರದಿದ್ದಲ್ಲಿ, ನಮ್ಮ ಬಗೆಗಿನ ನಿಮ್ಮ ಕರ್ತವ್ಯವನ್ನು ಮಾಡಲು ನಿಮಗೆ ಅಗತ್ಯವಿರುವಂತಹ

ಯಾವುದೇ ಕೃತ್ಯವನ್ನು ಮಾಡುವ ನಿಮ್ಮ ಕರ್ತವ್ಯ ಲೋಪದ ಮೂಲಕ ನಮ್ಮ ಹೊಣೆಗಾರಿಕೆಯಿಂದ ನಮ್ಮನ್ನು ಬಿಡುಗಡೆಗೊಳಿಸತಕ್ಕದ್ದಲ್ಲವೆಂಬುದಕ್ಕೆ ನಾವು ಸಹ ಒಪ್ಪಿರುತ್ತೇವೆ. ಪ್ರಧಾನ ಸಾಲಗಾರ ಮತ್ತು ನಮ್ಮ ನಡುವೆ ನಾನು/ನಾವು ಜಾಮೀನುದಾರ/ಜಾಮೀನುದಾರರು ಮಾತ್ರವಾಗಿದ್ದರೂ, ನಿಮ್ಮ ಮತ್ತು ನನ್ನ/ನಮ್ಮ ನಡುವೆ ನಾನು/ನಾವು ಪ್ರಧಾನ ಸಾಲಗಾರನೊಂದಿಗೆ ಜಂಟಿಯಾಗಿ ಪ್ರಧಾನ ಸಾಲಗಾರರಾಗಿರುತ್ತೇವೆ ಮತ್ತು ತದನುಸಾರವಾಗಿ ನಾವು ಕರಾರು ಅಧಿನಿಯಮದ 133,134,135,139 ಮತ್ತು 141 ನೇ ಪ್ರಕರಣಗಳ ಮೂಲಕ ಭದ್ರತೆಗಳ ಮೇಲೆ ಪ್ರದತ್ತವಾದ ಯಾವುದೇ ಹಕ್ಕಿಗೆ ಅರ್ಹರಾಗಿರುವುದಿಲ್ಲವೆಂದು ನಾನು/ನಾವು ಒಪ್ಪಿರುತ್ತೇನೆ/ವೆ.

5. ಪ್ರಧಾನ ಸಾಲಗಾರ ಅಥವಾ ಪ್ರಧಾನ ಸಾಲಗಾರರನ್ನು ಪ್ರತಿನಿಧಿಸುವ ಯಾರೇ ಅಥವಾ ಎಲ್ಲಾ ಸದಸ್ಯರು ಮರಣ ಹೊಂದಿದ್ದರೆ ಅಥವಾ ದಿವಾಳಿ ಎಂದು ನ್ಯಾಯ ನಿರ್ಣಯ ಕೈಗೊಂಡಿದ್ದರೆ ಅಥವಾ ಸ್ವಪ್ರೇರಣೆಯಿಂದ ಅಥವಾ ಅನ್ಯಥಾ ಸಮಾಪನಗೊಳಿಸಿದ್ದರೆ ಅಥವಾ ಆತನ/ಅವರ ಸಾಲಗಾರರೊಂದಿಗೆ ಯಾವುದೇ ವ್ಯವಸ್ಥೆ ಮಾಡಿಕೊಂಡಿದ್ದರೆ ಅಥವಾ ಯಾವುದೇ ಒಡಂಬಡಿಕೆ ಮಾಡಿಕೊಂಡಿದ್ದರೆ, ನೀವು (ಈ ಲಿಖಿತ ಪತ್ರದಡಿಯಲ್ಲಿ ನನ್ನ/ನಮ್ಮ ಹೊಣೆಗಾರಿಕೆಯ ಮೊಬಲಗಿನ ಇಡೀ ಅಥವಾ ಯಾವುದೇ ಭಾಗವನ್ನು ನನ್ನಿಂದ/ನಮ್ಮಿಂದ ಅಥವಾ ಇತರ ಯಾರೇ ವ್ಯಕ್ತಿಯಿಂದ ನಿಮಗೆ ಸಂದಾಯ ಮಾಡಿರುವುದು ಏನೇ ಇದ್ದರೂ) ಸಾಲಗಾರರೆಂದು ದರ್ಜೆ ನೀಡತಕ್ಕದ್ದು ಮತ್ತು ಪೂರ್ಣ ಮೊಬಲಗಿಗಾಗಿ ಪ್ರಧಾನ ಸಾಲಗಾರನ ಸಂಬಂಧದಲ್ಲಿ ರುಜುವಾತುಪಡಿಸತಕ್ಕದ್ದು ಮತ್ತು ನಿಮ್ಮ ಕ್ಲೇಮುಗಳು ಸಂಪೂರ್ಣವಾಗಿ ಈಡೇರುವವರೆಗೆ ನಿಮ್ಮೊಂದಿಗೆ ಸಂಯುಕ್ತವಾಗಿ ಅಂತಹ ಪ್ರಧಾನ ಸಾಲಗಾರನ ವಿರುದ್ಧ ಈ ಲಿಖಿತ ಪತ್ರದಡಿಯಲ್ಲಿ ನನ್ನ /ನಮ್ಮ ಎಲ್ಲಾ ಹಕ್ಕುಗಳನ್ನು ಬಿಟ್ಟುಬಿಡಲು ಅದರ ಮೇಲಿನ ಇಡೀ ಲಾಭಾಂಶಗಳನ್ನು, ಸಂಯೋಜನೆ ಅಥವಾ ಇತರ ಸಂದಾಯಗಳನ್ನು ಸ್ವೀಕರಿಸತಕ್ಕದ್ದು ಮತ್ತು ಉಳಿಸಿಕೊಳ್ಳತಕ್ಕದ್ದು ಮತ್ತು ನಾನು / ನಾವು ಪ್ರಧಾನ ಸಾಲಗಾರನ ವಿರುದ್ಧ ನಿಮ್ಮ ಇಡೀ ಕ್ಲೇಮು ಈಡೇರುವವರೆಗೆ ಈ ಲಿಖಿತ ಪತ್ರದಡಿಯಲ್ಲಿ ಅಥವಾ ಅದರ ಯಾವುದೇ ಭಾಗದಡಿ ನಿಮಗೆ ನನ್ನಿಂದ/ನಮ್ಮಿಂದ ಬರಬೇಕಾಗಿರುವ ಮೊಬಲಗನ್ನು ಸಂದಾಯ ಮಾಡಿರುವುದಿಲ್ಲ.

6. ನೀವು ಪ್ರದಾನ ಸಾಲಗಾರನಿಗೆ ಪ್ರತಿಯಾಗಿ ನಿಮ್ಮ ಇಡೀ ಕ್ಲೇಮನ್ನು ಹೊಂದಬೇಕೆಂಬ ಉದ್ದೇಶವಿಟ್ಟುಕೊಂಡಿದ್ದರೆ, ನಾನು/ನಾವು ಅಂತ್ತಹ ಪ್ರಧಾನ ಸಾಲಗಾರನಿಂದ ಬರಬೇಕಾಗಿರುವ ಮೊಬಲಗಿನ ಸಂಬಂಧದಲ್ಲಿ ನೀವು ಹೊಂದಿರುವಂತ್ತಹ ಅಥವಾ ಹಕ್ಕುಳ್ಳಂತ್ತಹ ಯಾವುದೇ ಇತರ ನಷ್ಟ ಭರ್ತಿ, ಭದ್ರತೆ, ಪರಿಹಾರ ಏನೆ ಇದ್ದರು ಮತ್ತು ಅಂತ್ತಹ ಪ್ರಧಾನ ಸಾಲಗಾರರನ್ನು ಹೊಣೆಗಾರನನ್ನಾಗಿಸಬೇಕಾದ ಇತರ ಯಾವುದೇ ಲೆಕ್ಕಗಳಲ್ಲಿ ನಿಮ್ಮೊಂದಿಗೆ ಪ್ರಧಾನ ಸಾಲಗಾರನ ಲೆಕ್ಕದಲ್ಲಿ /ಲೆಕ್ಕಗಳಲ್ಲಿ ಖರ್ಚು ಹಾಕಬೇಕಾದಂತಹ ಬಡ್ಡಿಗೆ ಸಂಬಂಧಿಸಿದ ಯಾವುದೇ ಬದಲಾವಣೆಗಳು ಏನೇ ಇದ್ದರೂ

ನೀವು ಈ ಲಿಖಿತ ಪತ್ರದಡಿಯಲ್ಲಿ ನನ್ನಿಂದ/ನಮ್ಮಿಂದ ನಿಮಗೆ ಬರಬೇಕಾಗಿರುವ ಪೂರ್ಣ ಮೊಬಲಗಿನ ಸಂದಾಯಕ್ಕೆ ಮತ್ತು ವಸೂಲಾತಿಗೆ ಒತ್ತಾಯಪಡಿಸಬಹುದು.

7. ನೀವು ಹೊಂದಿರುವ ಯಾವುದೇ ಭದ್ರತೆಗಳನ್ನು ನೀವೇ ತೆಗೆದುಕೊಳ್ಳುವ ಅಥವಾ ವ್ಯತ್ಯಾಸಗೊಳಿಸುವ ಅಥವಾ ಬಿಟ್ಟುಬಿಡುವ ಮೂಲಕ ಈ ಖಾತರಿಗೆ ಬಾಧಕವಾಗುವುದಿಲ್ಲವೆಂದು ನಾನು/ನಾವು ಒಪ್ಪಿದ್ದೇನೆ/ವೆ ಮತ್ತು ಘೋಷಿಸಿದ್ದೇನೆ/ವೆ.

8. ಯಾರೊಬ್ಬರ ಅಥವಾ ನಮ್ಮೆಲ್ಲರ ಮರಣ ಅಥವಾ ಮರಣಗಳಿಂದ ಈ ಖಾತರಿಗೆ ಬಾಧಕವಾಗುವುದಿಲ್ಲವೆಂದು, ಆದರೆ, ನಿಮ್ಮ ಲಿಖಿತ ಅಧಿಕಾರದ ಮೇರೆಗೆ ನನ್ನಿಂದ/ನಮ್ಮಿಂದ ರದ್ದುಪಡಿಸುವವರೆಗೆ ಪೂರ್ಣ ಜಾರಿಯಲ್ಲಿರುತ್ತದೆ ಮತ್ತು ಪರಿಣಾಮಕಾರಿಯಾಗಿರುತ್ತದೆಯೆಂದು ಮತ್ತು ನನ್ನ/ನಮ್ಮ ಸಂಸ್ಥೆಯ ಪಕ್ಷಕಾರರಲ್ಲಿ ಅಥವಾ ರಚನೆಯಲ್ಲಿ ಅಥವಾ ಪ್ರಧಾನ ರಚನೆಯಲ್ಲಿ ಕಾಲಕಾಲಕ್ಕೆ ಉಂಟಾಗುವ ಬದಲಾವಣೆ ಅಥವಾ ಬದಲಾವಣೆಗಳು ಏನೆ ಇದ್ದರೂ ಬಂಧನಕಾರಿಯಾಗಿರುವುದು ಮುಂದುವರಿಯತಕ್ಕದೆಂದು ನಾನು/ನಾವು ಒಪ್ಪಿದ್ದೇನೆ/ವೆ ಮತ್ತು ಘೋಷಿಸಿದ್ದೇನೆ/ವೆ.

9. ವ್ಯವಹಾರದ ಸಾಮಾನ್ಯ ಕ್ರಮದಲ್ಲಿ ನೀವು ನಿರ್ವಹಿಸುತ್ತಿರುವ ಲೆಕ್ಕದ ಪುಸ್ತಕಗಳಲ್ಲಿ ಮಾಡಬಹುದಾದ ಯಾವುದೇ ನಮೂದುಗಳನ್ನು ನೀವೇ ಒದಗಿಸಬೇಕು ಮತ್ತು ಅವುಗಳು ಯಾರೊಬ್ಬರ ಅಥವಾ ನಮ್ಮೆಲ್ಲರ ಅಥವಾ ಅದರಲ್ಲಿ ಒಳಗೊಂಡಿರುವ ವಿವಿಧ ವ್ಯವಹಾರಗಳ ನನ್ನ/ನಮ್ಮ ಯಾರೇ ಪ್ರತಿನಿಧಿ ಅಥವಾ ಪ್ರತಿನಿಧಿಗಳ ವಿರುದ್ಧ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದೆಂದು ಮತ್ತು ಕಾಲಕಾಲಕ್ಕೆ ಪ್ರಧಾನರಿಂದ ನಿಮಗೆ ಬಾಕಿ ಇದೆಯೆಂದು ಕಂಡುಬರುವ ಮೊಬಲಗಿನ ಸಂಬಂಧದಲ್ಲಿ ನಾವು ಅಥವಾ ನಮ್ಮಲ್ಲಿ ಯಾರೊಬ್ಬರು ಅಥವಾ ಯಾರೇ ಪ್ರತಿನಿಧಿ ಅಥವಾ ಪ್ರತಿನಿಧಿಗಳು ವಿವಾದಿಸುವುದಿಲ್ಲವೆಂದು ಅಥವಾ ಪ್ರಶ್ನಿಸುವುದಿಲ್ಲವೆಂದು ನಾನು/ನಾವು ಒಪ್ಪಿರುತ್ತೇನೆ/ವೆ.

10. ಈ ಮೂಲಕ ಖಾತರಿ ನೀಡಲಾದ ಮೊಬಲಗು ನಿಮಗೆ ಕೊಡಬೇಕಾಗಿದ್ದು, ಅದರ ಸಂದಾಯಕ್ಕಾಗಿ ಅಗತ್ಯವಿರುವ ನೋಟೀಸನ್ನು ನನಗೆ/ನಮಗೆ ಬರೆಯಲಾದ ನನ್ನ/ನಮ್ಮ ಅಥವಾ ನಮ್ಮ ಪ್ರತಿನಿಧಿಗಳ ವ್ಯವಹಾರ ಅಥವಾ ನಿವಾಸದ ಇತ್ತೀಚಿನ ವಿಳಾಸಕ್ಕೆ ನೋಂದಾಯಿತ ಅಂಚೆಯ ಮೂಲಕ ಬಟವಾಡೆ ಮಾಡಲಾದ ಅಥವಾ ಕಳುಹಿಸಲಾದ ಸೂಚನೆಯ ಮೂಲಕ ತಗಾದೆ ಮಾಡಿದಾಗ ಸಂದಾಯ ಮಾಡಲು ನಾನು/ನಾವು ಒಪ್ಪಿದ್ದೇನೆ/ವೆ.

11. ನನಗೆ/ನಮಗೆ ಸಂಬಂಧಿಸಿದ ವಾರಸುದಾರರು, ಆಡಳಿತಗಾರರು, ಕಾರ್ಯನಿರ್ವಾಹಕರು, ಉತ್ತರಾಧಿಕಾರಿಗಳು, ಪ್ರತಿನಿಧಿಗಳು ಮತ್ತು ಹಸ್ತಾಂತರ ಪಡೆದವರು ಯಾವ ರೀತಿಯಲ್ಲಿ ಬಂಧನಕಾರಿಯಾಗಿರುವರೀ ಅದೇ ರೀತಿಯಲ್ಲಿ ಈ ಖಾತರಿಯು ನಿಬಂಧನೆಗಳಿಂದ ಬಂಧನಕಾರಿಯಾಗಿರುತ್ತವೆಂದು ಮತ್ತು ಯಾರೊಬ್ಬರ ಅಥವಾ ನಮ್ಮೆಲ್ಲರ ಮರಣ ಅಥವಾ ಮರಣಗಳ

ಕಾರಣದಿಂದಲೇ ಈ ಖಾತರಿಯು ರದ್ದಿಯಾತಿಯಾಗುವುದಿಲ್ಲ ಮತ್ತು ಈ ಖಾತರಿಯನ್ನು ನೀವು ಮತ್ತು / ಅಥವಾ ನಿಮ್ಮಿಂದ ಹಸ್ತಾಂತರ ಪಡೆದವರು, ವರ್ಗಾವಣೆ ಪಡೆದವರು ಮತ್ತು ಹಿತಾಸಕ್ತಿಯುಳ್ಳ ಉತ್ತರಾಧಿಕಾರಿಯಿಂದ ಅಮಲು ಜಾರಿಗೊಳಿಸಬಹುದೆಂದು ನಾನು/ನಾವು ಒಪ್ಪಿದ್ದೇನೆ/ವೆ ಹಾಗೂ ವಾಗ್ದಾನ ನೀಡುತ್ತೇನೆ/ವೆ.

12. ಈ ಖಾತರಿ ಮುಂದುವರಿದಿರುವ ಯಾವುದೇ ಸಮಯದಲ್ಲಿ ಪ್ರಧಾನ ಲೆಕ್ಕ/ಲೆಕ್ಕಗಳಿಗೆ ಸಂದಾಯ ಮಾಡಲಾಗುವ ಯಾವುದೇ ಮೊತ್ತ ಅಥವಾ ಮೊತ್ತಗಳನ್ನು ಗಣನೆಗೆ ತೆಗೆದುಕೊಳ್ಳದೆ ಈ ಖಾತರಿ ಮುಂದುವರಿಯತಕ್ಕದ್ದೆಂದು ಮತ್ತು ನಿಮ್ಮ ಲಿಖಿತ ಅಧಿಕಾರದ ಮೇರೆಗೆ ರದ್ದುಪಡಿಸುವವರೆಗೆ ಜಾರಿಯಲ್ಲಿರತಕ್ಕದೆಂದು ನಾನು/ನಾವು ಒಪ್ಪಿದ್ದೇನೆ/ವೆ ಮತ್ತು ಘೋಷಿಸುತ್ತೇನೆ/ವೆ ಆಗ ಬಾಕಿ ಇರುವ ಮೊಬಲಗು ಈ ಖಾತರಿಗೆ ಒಳಪಟ್ಟಿರತಕ್ಕದ್ದು ಮತ್ತು ಆ ಮೂಲಕ ಪಡೆಯತಕ್ಕದ್ದು.

13. ಈ ಖಾತರಿಯ ವಸ್ತು ವಿಷಯ ಅಥವಾ ಪ್ರಧಾನ ಸಾಲಗಾರರ/ನ ವಿರುದ್ಧ ನೀವು ಪಡೆದಿರುವ ಯಾವುದೇ ತೀರ್ಪು ಅಥವಾ ಯಾವುದೇ ಐತೀರ್ಪಿಗೆ ಸಂಬಂಧಿಸಿದಂತೆ, ಪ್ರಧಾನ ಸಾಲಗಾರ ಅಥವಾ ಇತರರ ಸಾಲದ ಮೊಬಲಗಿನ ಸಂಬಂಧದಲ್ಲಿ ಪ್ರಾಧನ ಸಾಲಗಾರನಿಂದ ನೀಡಿದ ಯಾವುದೇ ಒಪ್ಪಿಗೆ ಅಥವಾ ಸ್ವೀಕೃತಿಯು ನನ್ನ/ನಮ್ಮ ಮೇಲೆ ಬಂಧನಕಾರಿಯಾಗಿರುತ್ತದೆಂದು ಮತ್ತು ನಿಗಮದ ಯಾರೇ ವ್ಯವಸ್ಥಾಪಕ ನಿರ್ದೇಶಕರು ಅಥವಾ ಅಧಿಕಾರಿಯಿಂದ ವಿದ್ಯುಕ್ತವಾಗಿ ಜಾರಿಗೊಳಿಸಲಾದ ಪ್ರಧಾನ ಸಾಲಗಾರ ಮೇಲಿನ ಯಾವುದೇ ಲೆಕ್ಕದ ವಿವರ ಪಟ್ಟಿಯ ಸತ್ಯತೆಯನ್ನು ನಾನು/ನಾವು ಒಪ್ಪಿದ್ದೇನೆ/ವೆ ಎಂದು ಮತ್ತು ಅದು ನನ್ನ/ನಮ್ಮ ಮೇಲೆ ಬಂಧನಕಾರಿಯಾಗಿರುತ್ತದೆಂದು ಮತ್ತು ನಿರ್ಣಾಯಕವಾಗಿರುತ್ತದೆಂದು ನಾನು/ನಾವು ಒಪ್ಪಿದ್ದೇನೆ/ವೆ ಮತ್ತು ಸಂದಾಯ ಮಾಡುವಲ್ಲಿ ಭಾರತ ಕಾಲಪರಿಮಿತಿ ಅಧಿನಿಯಮ, 1963 ರ ಉದ್ದೇಶಕ್ಕಾಗಿ ಅವರನ್ನು ನನ್ನ/ನಮ್ಮ ವಿದ್ಯುಕ್ತ ಅಧಿಕೃತ ಏಜೆಂಟ್ ಎಂದು ಪರಿಗಣಿಸತಕ್ಕದ್ದೆಂದು ನಾನು/ನಾವು ಒಪ್ಪಿದ್ದೇನೆ/ವೆ.

14. ಇದರಲ್ಲಿ ಈ ಮೊದಲು ಏನೇ ಇದ್ದರೂ, ಈ ಲಿಖಿತ ಪತ್ರದ ಮೇರೆಗಿನ ನನ್ನ/ನಮ್ಮ ಹೊಣೆಗಾರಿಕೆಯು ಪ್ರಧಾನನ ಎಲ್ಲಾ ಲೆಕ್ಕಗಳಿಗೆ, ಅದು ಪ್ರಧಾನನಿಗೆ ಸಂಬಂಧಿಸಿದ ಲೆಕ್ಕ ಅಥವಾ ಲೆಕ್ಕಗಳಾಗಿರಲಿ ಅಥವಾ ಪ್ರಧಾನನು ಯಾವುದೇ ಕಂಪನಿ, ಸಂಸ್ಥೆ ಅಥವಾ ವ್ಯಕ್ತಿಗಳಿಗೆ ಸಂಬಂಧಿಸಿದಂತೆ, ಯಾವುದೇ ರೀತಿಯಲ್ಲಿ ಸಂಸ್ಥೆಯ ಲೆಕ್ಕ ಅಥವಾ ಲೆಕ್ಕಗಳಿಗೆ ಜಂಟಿಯಾಗಿ ಬದ್ಧನಾಗಿರುತ್ತಾನೆ ಮತ್ತು ಅಂತಹ ಲೆಕ್ಕ ಅಥವಾ ಲೆಕ್ಕಗಳು ಪ್ರಧಾನನ ಹೆಸರಿನಲ್ಲಿ ಸ್ವತಃ ಅಥವಾ ಪ್ರಧಾನನು ಏಕಮಾತ್ರ ಮಾಲೀಕ, ಪಾಲುದಾರ ಅಥವಾ ಯಾವುದೇ ಇತರರ ಹೆಸರಿನಲ್ಲಿ ಕರೆಯುವಂತೆ ಯಾವುದೇ ಸಂಸ್ಥೆಯ ಅಂತಹವರ ಹೆಸರಿನಲ್ಲಿ ಇದ್ದಲ್ಲಿ ಮತ್ತು ಅದು ಅಂತಹ ಲೆಕ್ಕ ಅಥವಾ ಲೆಕ್ಕಗಳ ಹೆಸರಿನಲ್ಲಿ ಯಾವುದೇ

ಬದಲಾವಣೆಯಾಗುವುದರಿಂದ ಅಥವಾ ನಿಮ್ಮ ನಿಗಮ, ಅದರ ಉತ್ತರಾಧಿಕಾರಿ, ಹಸ್ತಾಂತರಪಡೆದವರು ಅಥವಾ ವರ್ಗಾವಣೆ ಸಮಾಲೋಚನೆಯಲ್ಲಿನ ಬದಲಾವಣೆಯಿಂದಾಗಿ ಅಥವಾ ಶಾಸನದ ಮೂಲಕ ವಿದ್ಯುಕ್ತವಾಗಿ ರಚಿತವಾದ ಯಾವುದೇ ಇತರ ಇಲಾಖೆ ಅಥವಾ ಇಲಾಖೆಗಳೊಡನೆ ಅದರ ವಿಲೀನ ಅಥವಾ ಸಂಯೋಜನೆಯ ಮೂಲಕ ಬಾಧಕ ಉಂಟಾಗುವುದಿಲ್ಲ.

15. ಈ ಖಾತರಿಯ ಬಾಧ್ಯತೆಗಳಿಂದ ನಮ್ಮಲ್ಲಿ ಯಾರೊಬ್ಬರನ್ನು ಬಿಡುಗಡೆ ಮಾಡಲು ಅಥವಾ ವಿಮೋಚಿಸಲು ಅಥವಾ ನಮ್ಮಲ್ಲಿ ಯಾರೊಬ್ಬರಿಂದ ಒಡಂಬಡಿಕೆಯನ್ನು ಒಪ್ಪಲು ಅಥವಾ ನಮ್ಮ ಹಕ್ಕುಗಳು ಅಥವಾ ಇತರ ಅಥವಾ ನಮ್ಮಲ್ಲಿ ಇತರರ ವಿರುದ್ಧ ಪರಿಹಾರಗಳಿಗೆ ಪ್ರತಿಕೂಲವಾಗದಂತೆ ಅಥವಾ ಬಾಧಕವಾಗದಂತೆ ಯಾವುದೇ ಇತರ ವ್ಯವಸ್ಥೆ ಮಾಡಿಕೊಳ್ಳಲು ನೀವು ಮುಕ್ತರಾಗಿರುತ್ತೀರಿ.

16. ಈ ಖಾತರಿ ಮತ್ತು ಇದರಲ್ಲಿರುವ ಅಧಿಕಾರಗಳು ಮತ್ತು ಉಪಬಂಧಗಳು ಇದಕ್ಕೆ ಪೂರಕವಾಗಿರುತ್ತವೆಂದು ಮತ್ತು ಅವುಗಳನ್ನು ನನ್ನಿಂದ/ನಮ್ಮಿಂದ ನಿಮಗೆ ಸಂಬಂಧವಿಲ್ಲದ (ನಿಮ್ಮ ನಿಗಮದ ಯಾವುದೇ ಕಛೇರಿಯಲ್ಲಿ ಮತ್ತೊಬ್ಬ ಅಥವಾ ಇತರರಿಗೆ ಒಂಟಿಯಾಗಿ ಅಥವಾ ಜಂಟಿಯಾಗಿ) ಯಾರೇ ಹಿಂದಿನ ಅಥವಾ ಇತರ ಖಾತರಿ, ಖಾತರಿಗಳು ಅಥವಾ ಭದ್ರತೆಗಳಿಗೆ ನಮ್ಮ ಪ್ರತಿ ಯೋಜನೆಯ ಮಿತಿಯ ಮೂಲಕ ಸೇರಿಸಿರುವುದಿಲ್ಲವೆಂದು ನಾನು/ನಾವು ಈ ಮೂಲಕ ವ್ಯಕ್ತವಾಗಿ ಘೋಷಿಸಿದ್ದೇನೆ/ವೆ.

ಈ ಲಿಖಿತ ಪತ್ರದ ಮೇರೆಗಿನ ನನ್ನ/ನಮ್ಮ ಹೊಣೆಯು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿರುತಕ್ಕದ್ದು.

ಇದಕ್ಕೆ ಸಾಕ್ಷ್ಯವಾಗಿ ನಾನು/ನಾವು ____________________ ವರ್ಷದ ____________________ ತಿಂಗಳ ____________________ ದಿನಾಂಕವಾದ ಇಂದು ನನ್ನ/ನಮ್ಮ ಸಹಿ ಮಾಡಿರುತ್ತೇನೆ/ವೆ.

ನಮ್ಮ ವಿಶ್ವಾಸಿ,

ಖಾತರಿದಾರ (ರು).

ಸ್ಥಳ:

ದಿನಾಂಕ:

ಒಬ್ಬನೆ ಖಾತರಿದಾರನಿದ್ದಾಗ ಅಧಿಪ್ರಮಾಣೀಕರಣದ ಮೇರೆಗೆ ಈ ಖಂಡವನ್ನು ಬಿಟ್ಟುಬಿಡಬೇಕು.

# ಅನುಬಂಧ-7
# Annexure-7

ಇಂದ: ಸ್ಥಳ:

______________________________

__________ ದಿನಾಂಕ:

______________________________

__________

______________________________

__________

______________________________

__________

______________________________

__________

(ಸಾಲ ತೆಗೆದುಕೊಳ್ಳುವವನ(ರ) ಹೆಸರು/ಗಳು ಮತ್ತು ವಿಳಾಸ/ಗಳು)

ಗೆ,
ವ್ಯವಸ್ಥಾಪಕ ನಿರ್ದೇಶಕರು, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು.

## ಸಾಲ ತೆಗೆದುಕೊಳ್ಳುವವನಿಂದ ಋಣದ ಒಪ್ಪಿಗೆ
## (ACKNOWLEDGEMENT OF DEBT FROM BORROWER)

ನೀವು ದಾಖಲಿಸಿರುವ ನಿಮ್ಮಿಂದ ನನಗೆ/ನಮಗೆ ಮಂಜೂರಾಗಿರುವ ____________________ ರೂಪಾಯಿಗಳ ಸಾಲ/ಸೌಲಭ್ಯಕ್ಕೆ ಸಂಬಂಧಿಸಿದ ವ್ಯವಹಾರಗಳಲ್ಲಿ ನಿಮ್ಮಲ್ಲಿರುವ ಖಾತಾ ಸಂಖ್ಯೆ: ______________________________ ಇದರ ಅಡಿಯಲ್ಲಿ______________________________. ವರೆಗಿನ ಬಡ್ಡಿಯನ್ನೊಳಗೊಂಡಿರುವ ______________________________ ರೂಪಾಯಿಗಳ (__________ ______________________________ ರೂಪಾಯಿಗಳು ಮಾತ್ರ) ನನ್ನ/ನಮ್ಮ ಋಣದ ಹೊಣೆಗಾರಿಕೆಯನ್ನು ನಾನು/ನಾವು ಈ ಮೂಲಕ ಒಪ್ಪಿದ್ದೇನೆ/ವೆ.

ಮೇಲೆ ಹೇಳಿದ ಸಾಲ/ಸೌಲಭ್ಯದ ಸಂಬಂಧದಲ್ಲಿ ನಾನು/ನಾವು ಪಕ್ಷಕಾರನಾ/ರಾಗಿರುವ, ನಾನು /ನಾವು ಕೊಟ್ಟಿರುವ ಎಲ್ಲಾ ಭದ್ರತೆಗಳು ಮತ್ತು ಬರೆದುಕೊಟ್ಟಿರುವ ಪ್ರಾಮಿಸರಿ ನೋಟುಗಳು, ಒಪ್ಪಂದಗಳು, ವಚನಬಂಧಗಳು ಅಥವಾ ಇತರ ಕಾಗದ ಪತ್ರಗಳು ಪೂರ್ಣ ಜಾರಿ ಮತ್ತು ಪರಿಣಾಮದೊಡನೆ ನನ್ನ/ನಮ್ಮ ಮೇಲೆ ಬಂಧನಕಾರಿಯಾಗಿರುವುದು ಮುಂದುವರೆಯುತ್ತದೆ.

ಮೇಲೆ ಹೇಳಿದ ಸಾಲ/ಸೌಲಭ್ಯ ಪಡೆಯಲು ನಿಮ್ಮ ಪರವಾಗಿ ಮಾಡಿಕೊಡಲಾಗಿರುವ______________ ______________ ಇಲ್ಲಿರುವ ನನ್ನ/ನಮ್ಮ ಆಸ್ತಿಗಳ ಅಡಮಾನವು ಪೂರ್ಣ ಜಾರಿ ಮತ್ತು ಪರಿಣಾಮದೊಡನೆ ಮುಂದುವರೆಯುತ್ತದೆಂದು ನಾನು/ನಾವು ಈ ಮೂಲಕ ಸ್ಥಿರೀಕರಿಸಿದ್ದೇನೆ/ವೆ.

ರೆವಿನ್ಯೂ
ಸ್ಟಾಂಪ್

( ಅವಶ್ಯಕ ಮೌಲ್ಯದ ಕಂದಾಯ ಮುದ್ರಾಂಕದ ಮೇಲೆ ಸಾಲ ಪಡೆಯುವವರ ಸಹಿ)

# ಅನುಬಂಧ-8
# Annexure-8

## ಖಾತರಿದಾರನಿಂದ ಋಣದ ಒಪ್ಪಿಗೆ
## (ACKNOWLEDGEMENT OF DEBT FROM THE GUARANTOR)

ಇಂದ: ______________________ ಸ್ಥಳ:

______________________

______________________ ದಿನಾಂಕ:

______________________

______________________

______________________

______________________

______________________

______________________

______________________

ಗೆ,
ವ್ಯವಸ್ಥಾಪಕ ನಿರ್ದೇಶಕರು,ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು.

ಮಾನ್ಯರೇ,

ವಿಷಯ:______________________ ಗೆ ನಿಮ್ಮಿಂದ ಮಂಜೂರಾಗಿರುವ ಸಾಲ ಸೌಲಭ್ಯಕ್ಕೆ ನಿಮ್ಮ ಪರವಾಗಿ ______________________ ರೂಪಾಯಿಗಳಿಗೆ ನಾನು/ನಾವು ಬರೆದುಕೊಟ್ಟ______________ ______________ ದಿನಾಂಕದ ಖಾತರ ಪತ್ರ.

______________________ ಅವರಿಗೆ ಮಂಜೂರಾಗಿರುವ ಸಾಲ ಸೌಲಭ್ಯಗಳ ಸಂಬಂಧದಲ್ಲಿ ______________________ ರಂದು ನಾನು/ನಾವು ಬರೆದುಕೊಟ್ಟಿರುವ ಖಾತರಿ ಪತ್ರ ವಿಷಯಕ್ಕೆ ಸಂಬಂಧಿಸಿದಂತೆ, ______________________ ವರೆಗೆ ಬಡ್ಡಿ ವೆಚ್ಚಗಳು ಇತ್ಯಾದಿಗಳ ಹಾಗೂ ಬಾಕಿ ಇರುವ ಆ ತರುವಾಯದ ಬಡ್ಡಿ ವೆಚ್ಚಗಳು ಇತ್ಯಾದಿಗಳನ್ನು ಒಳಗೊಂಡಿರುವ ಸದರಿ ಖಾತರಿಯ ಮೇರೆಗೆ ರೂ.______________________ಗಳ ( ______________________ ______________________ ರೂಪಾಯಿಗಳು ಮಾತ್ರ)

ನನ್ನ/ನಮ್ಮ ಋಣದ ಹೊಣೆಗಾರಿಕೆಯನ್ನು ನಾನು/ನಾವು ಈ ಮೂಲಕ ಒಪ್ಪಿರುತ್ತೇನೆ/ವೆ. ಮೊದಲನೇ ಒಪ್ಪಿಗೆ ಪತ್ರವನ್ನು

ನಾನು/ನಾವು________________________________ ರಂದು ಬರೆದುಕೊಟ್ಟಿದ್ದೇವೆಂದು ನಾನು/ನಾವು

ಸ್ಥಿರೀಕರಿಸಿದ್ದೇನೆ/ವೆ.

ಸಾಕ್ಷಿಗಳು: 1.

2.

ಸಹಿ

ಹೆಸರು ಮತ್ತು ವಿಳಾಸ

ತಮ್ಮ ವಿಶ್ವಾಸಿ

ಮುದ್ರಾಂಕ

( ಖಾತರಿದಾರರ ಸಹಿ)